ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಆಷಾಢ ೧೪ ಶಕ ೧೯೧೩ ಶುಕ್ರವಾರ ೫ನೇ ಜುಲೈ ೧೯೯೧

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೫ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಸಂತಾಪ ಸೂಚಕ ನಿರ್ಣಯ

ಶ್ರೀ ರಾಜೀವ್‌ಗಾಂಧಿಯವರ ಬರ್ಬರ ಹತ್ಯೆ

ಅಧ್ಯಕ್ಷರು: ಸನ್ಮಾನ್ಯ ಸದಸ್ಯರೇ ಶ್ರೀ ಪೆರೆಂಬದೂರಿನಲ್ಲಿ 1991ರ ಮೇ 21ರ ಕರಾಳ ರಾತ್ರಿಯಂದು ಇಡೀ ರಾಷ್ಟ್ರವನ್ನಷ್ಟೇ ಅಲ್ಲ ವಿಶ್ವವನ್ನೇ ತಲ್ಲಣಗೊಳಿಸಿ ದಿಗ್ಭ್ರಾಂತವಾಗಿಸಿದ ಶ್ರೀ ರಾಜೀವ್ ಗಾಂಧಿಯವರ ಹತ್ಯೆ ಹಿಂದೆಂದೂ ಕಂಡರಿಯದ ಭೀಕರ ಮತ್ತು ಹೇಯ ಸಂಗತಿಯಾಗಿದ್ದು ನಿಮ್ಮೊಂದಿಗೆ ಮತ್ತು ರಾಜ್ಯದೊಂದಿಗೆ ನನ್ನ ತೀವ್ರ ದುಃಖವನ್ನು ಹಾಗೂ ಪರಿತಾಪವನ್ನು ಹಂಚಿಕೊಳ್ಳಬಯಸುತ್ತೇನೆ. ಅವರ ಮರಣದಿಂದಾಗಿ ಒಬ್ಬ ಆದರ್ಶ ಮುತ್ಸದ್ದಿಯನ್ನು ಎಣೆಯಿಲ್ಲದ ರಾಷ್ಟ್ರಭಕ್ತಿ ಕ್ರಿಯಾಶೀಲತೆ ಆದಮ್ಯ ಕೆಚ್ಚು ಹಾಗೂ ತಾಯ್ನಾಡಿನ ಪುರೋಭಿವೃದ್ಧಿಗೆ ಕಂಕಣಬದ್ಧರಾಗಿದ್ದ ಒಬ್ಬ ಯುವ ರಾಜನೀತಿಜ್ಞನನ್ನು ರಾಷ್ಟ್ರವು ಕಳೆದುಕೊಂಡಿದೆ. ಪ್ರಧಾನಮಂತ್ರಿಯ ಪದವಿ ಪುನಃ ಅವರ ನಿಲುಕುವಂತಿದ್ದ ಸಮಯದಲ್ಲಿ ಅವರನ್ನು ರಾಷ್ಟ್ರೀಯ ವೇದಿಕೆಯಿಂದಲೇ ಇಲ್ಲವಾಗಿಸಿದ್ದಾರೆ. ಶ್ರೀ ರಾಜೀವ್ ಗಾಂಧಿಯವರು ರಾಷ್ಟ್ರ ರಾಜಕಾರಣದಲ್ಲಿ ಉಲ್ಕೆಯಂತೆ ಬಂದು ನಕ್ಷತ್ರದಂತೆ ಮಿನುಗಿ ತ್ರಿವಿಕ್ರಮನಂತೆ ಬೆಳೆದು ಮಿಂಚಿನಂತೆ ಮಾಯವಾಗಿದ್ದಾರೆ.

ಶ್ರೀ ಫಿರೋಜ್‌ಗಾಂಧಿ ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರ ಹಿರಿಯ ಮಗನಾಗಿ 1944ರ ಆಗಸ್ಟ್ 20 ರಂದು ಜನಿಸಿದ ಶ್ರೀ ರಾಜೀವ್ ಗಾಂಧಿಯವರು ಸ್ವಾತಂತ್ರ್ಯ ಚಳುವಳಿಯ ಮಹಾನ್ ಕಾರ್ಯದಲ್ಲಿ ಪಾಲ್ಗೊಂಡಿದ್ದಂಥ ಮನೆತನದ ಪರಿಸರದಲ್ಲಿ ಬೆಳೆದರು. ವಿಮಾನಯಾನದಲ್ಲಿ ಅವರಿಗೆ ಒಲವಿತ್ತೇ ಹೊರತು ರಾಜಕೀಯದಲ್ಲಿ ಅವರಿಗೆ ಆಸಕ್ತಿ ಇರಲಿಲ್ಲ ಆದರೆ ದೈವ ನಿಯಾಮಕವೆ ಬೇರೆಯಾಗಿತ್ತು. ವಿಮಾನ ಅಪಘಾತವೊಂದರಲ್ಲಿ ಅವರ ಸೋದರ ಸಂಜಯಗಾಂಧಿ ಮೃತರಾದ ದಿನವೆ ರಾಜಕೀಯ ಕ್ಷೇತ್ರದ ಸುಳಿಯು ಅವರನ್ನು ಆಕಸ್ಮಿಕವಾಗಿ ತನ್ನೊಳಗೆ ಸೆಳೆದುಕೊಂಡಾಗ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮಹಾ ಕಾರ್ಯದರ್ಶಿ ಪದವಿಯ ಹೊಣೆಗಾರಿಕೆಯನ್ನು ಅವರಿಗೆ ವಹಿಸಲಾಯಿತು. ಶ್ರೀಮತಿ ಇಂದಿರಾ ಗಾಂಧಿಯವರ ಘೋರ ಹತ್ಯೆಯ ನಂತರ 40ರ ವಯಸ್ಸಿನಲ್ಲಿ ಅವರು ಅರೆ ಮನಸ್ಸಿನಿಂದಲೇ ಅತ್ಯಂತ ಕಿರಿಯ ವಯಸ್ಸಿನ ಪ್ರಧಾನ ಮಂತ್ರಿಯಾದರು ಆ ತರುವಾಯ ಅವರು ಹಿಂದೆ ತಿರುಗಿ ನೋಡಿದ್ದೇ ಇಲ್ಲ. ಅವರು ಈ ಉನ್ನತ ಹುದ್ದೆಯ ಗುರುತರ ಜವಾಬ್ದಾರಿಯನ್ನು ಅದೆಷ್ಟು ಧೈರ್ಯ, ಸ್ಥೈರ್ಯ, ದಿಟ್ಟತನಗಳಿಂದ ಸ್ಥಿರ ಮನಸ್ಸು ದೃಢ ಸಂಕಲ್ಪದಿಂದ ಅತ್ಯುತ್ತಮವಾಗಿ ನಿರ್ವಹಿಸಿದರೆಂಬುದು ಸರ್ವವಿಧಿತ. ಈ ಗುಣವಿಶೇಷಗಳಷ್ಟೂ ಅವರು

ತಮ್ಮ ತಂದೆ ತಾಯಿ ಮತ್ತು ತಾತನವರಿಂದ ವಂಶ ಪಾರಂಪರ್ಯವಾಗಿ ಪಡೆದ ಬಳುವಳಿ.

ಸಂಸ್ಕೃತಿಯ ಬಗ್ಗೆ ಅಭಿರುಚಿ ವಿವೇಚನೆ ಮಾನವ ಘನತೆಯಲ್ಲಿ ವಿಶ್ವಾಸವುಳ್ಳ ವೈವಿಧ್ಯಮಯ ವ್ಯಕ್ತಿತ್ವ ಶ್ರೀ ರಾಜೀವ್ ಗಾಂಧಿಯವರದು. ಅವರೊಬ್ಬ ಅದಮ್ಯ ಉತ್ಸಾಹದ ಅತ್ಯಾಕರ್ಷಕ ವ್ಯಕ್ತಿ. ಅವರು ಸಂಗೀತದಲ್ಲಿ ಲಲಿತಕಲೆಗಳಲ್ಲಿ ಛಾಯಚಿತ್ರಕಲೆಯಲ್ಲಿ ಅತ್ಯಂತ ಅಭಿರುಚಿಯುಳ್ಳವರಾಗಿದ್ದರು. ಉಡಿಗೆ ತೊಡಿಗೆಗಳ ವಿಚಾರದಲ್ಲಿ ಅವರು ಸದಾ ಅಚ್ಚುಕಟ್ಟು (ಭಾರತೀಯ ಉಡುಪುಗಳೇ ಆಗಲೀ ಪಾಶ್ಚಾತ್ಯ ಉಡುಪುಗಳೇ ಆಗಲಿ ಅವೆರಡರಲ್ಲೂ ಅವರು ಅತ್ಯಂತ ಸಹಜವಾಗಿ ಕಾಣುತ್ತಿದ್ದರು)

ರಾಜೀವ್ ಗಾಂಧಿಯವರು ಪ್ರತ್ಯೇಕತಾ ಪ್ರವೃತ್ತಿ ಮತ್ತು ಧಾರ್ಮಿಕ ಅಂಧಶ್ರದ್ಧೆಯ ವಿರುದ್ಧದ ಆಧುನೀಕತೆಯ ಪ್ರತೀಕವಾಗಿದ್ದರು. ಅವರು ದೇಶದ ರಾಜಕೀಯ ವ್ಯವಸ್ಥೆಯನ್ನು ಸರಳಗೊಳಿಸಲು ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಕೆಲವೊಂದು ಸುಧಾರಣೆಗಳನ್ನು ತರಲೂ ಪ್ರಯತ್ನಿಸಿದರು ಅಂತರರಾಷ್ಟ್ರೀಯ ಶಾಂತಿ ಸೌಹಾರ್ದತೆಗಳಿಗಾಗಿ ಅವರು ಸತತವಾಗಿ ಶ್ರಮಿಸಿದರು. ದೇಶದ ರಾಜಕೀಯಕ್ಕೆ ಅವರ ಪ್ರವೇಶ ಯುವ ಜನಾಂಗಕ್ಕೆ ದೊರೆತ ಸದವಕಾಶದ ಪ್ರತೀಕ. ದುರದೃಷ್ಟವಶಾತ್ ತಾನು ಬಯಸಿದ ಆಕಾಂಕ್ಷೆಗಳನ್ನು ಈಡೇರಿಸುವ ತೀವ್ರ ಪ್ರಯತ್ನದಲ್ಲಿದ್ದಾಗಲೇ ಅವರು ಬರ್ಬರ ಅಮಾನುಷ ಹಿಂಸಾಕೃತ್ಯಕ್ಕೆ ಬಲಿಯಾದರು.

ಅವರ ಅಪೂರ್ವ ಮೋಹಕ ಮುಗುಳ್ನಗೆ ನಡಿಗೆಯ ಠೀವಿ ಭವಿಷ್ಯದ ಕನಸುಗಳು ಆಕಾಂಕ್ಷೆಗಳು ಆಶೋತ್ತರಗಳು ಹಾಗೂ ಕಲ್ಪನೆ ಇವೆಲ್ಲವೂ ಅವರೊಂದಿಗೆ ಕಣ್ಮರೆಯಾಗಿವೆ. ಉಳಿದವೆಂದರೆ ಅವರ ಸಾಧನೆಗಳು ಮತ್ತು ಅವರು ತೋರಿದ ಮಾರ್ಗ ಮಾತ್ರ.

ಅವರು ಉಜ್ವಲ ದೇಶಪ್ರೇಮ ದೀನದುರ್ಬಲರ ಬಗ್ಗೆ ಅವರಿಗಿದ್ದ ಕಳಕಳಿ ಜನರನ್ನು ಹಾಗೂ ಸಮಸ್ಯೆಗಳನ್ನು ಅವರು ನಿರ್ವಹಿಸುತ್ತಿದ್ದ ರೀತಿ ಅವರ ತೀಕ್ಷ್ಣ ಗ್ರಹಣಶಕ್ತಿ ಉದ್ದೇಶ ಸಾಧನೆಯಲ್ಲಿ ಅವರಿಗಿದ್ದ ಶ್ರದ್ಧೆ ಜನಜೀವನ ಮಟ್ಟವನ್ನು ಸುಧಾರಿಸುವ ಹಾಗೂ ದೇಶದ ಸಮಸ್ಯೆಗಳನ್ನು ಪರಿಹರಿಸುವ ದಿಶೆಯಲ್ಲಿ ಅವರು ಮಾಡಿದ ಪ್ರಯತ್ನ ಇವೆಲ್ಲವುಗಳಿಂದಾಗಿ ಭಾರತ ಮಾತೆಯ ಈ ಸುಪುತ್ರ ಚಿರಕಾಲ ನಮ್ಮ ನೆನಪಿನಲ್ಲಿ ಉಳಿಯುತ್ತಾರೆ.

ಮೋತಿಲಾಲರಿಂದ ರಾಜೀವ್ ಗಾಂಧಿಯವರೆಗಿನ ಈ ಪ್ರಖ್ಯಾತ ಕುಟುಂಬವು ಜೀವನದುದ್ದಕ್ಕೂ ಮಾಡಿದ ತ್ಯಾಗ ಅನುಭವಿಸಿದ ಸಂಕಷ್ಟ ತೋರಿದ ಶ್ರದ್ಧೆ ಹಾಗೂ ಸಮರ್ಪಣಾ ಮನೋಭಾವ ಜಾತೀಯತೆ ದ್ವೇಷ ಅಪನಂಬಿಕೆ ಹಿಂಸಾಚಾರ ವಿಚಿದ್ರಕಾರಿ ಪ್ರವೃತ್ತಿ ಬಂದೂಕು ಸಂಸ್ಕೃತಿ ಹಾಗೂ ರಕ್ತಪಾತದ ವಿರುದ್ಧ ನಡೆಸಿದ ಹೋರಾಟ ಇವೆಲ್ಲವುಗಳಿಂದಾಗಿ ಇವರೆಲ್ಲರೂ ಇತಿಹಾಸದ ಪುಟಗಳಲ್ಲಿ ಶಾಶ್ವತವಾದ ಸ್ಥಾನವನ್ನು ಗಳಿಸಿದ್ದಾರೆ. ರಾಷ್ಟ್ರಕ್ಕೆ ಈ ಕುಟುಂಬ ಸಲ್ಲಿಸಿದ ಅಮೋಘ ಸೇವೆಗೆ ಸಂದ ಬೆಲೆ ಇದಯೇ ಎಂಬ ಪ್ರಶ್ನೆ ರಾಷ್ಟ್ರದ ಮುಂದೆ ಇದೆ.

ಈ ಪ್ರಶ್ನೆಗೆ ದೇಶವೇ ಉತ್ತರಿಸಬೇಕಾಗಿದೆ. 1984ರಿಂದೀಚೆಗೆ ಇದೀಗ ಎರಡನೆಯ ಬಾರಿಗೆ ದೇಶವು ಸಂಕಟಕ್ಕೆ ಈಡಾಗಿದೆ.

ದುಃಖದ ಈ ಸಮಯದಲ್ಲಿ ಅಗಲಿದ ನಾಯಕನಿಗೆ ನಾನು, ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ ಹಾಗೂ ಅಪಾರ ಸಂಯಮವನ್ನು ತೋರಿ, ಭರಿಸಲಾಗದ ಈ ನಷ್ಟವನ್ನು ಅತ್ಯಂತ ಧೈರ್ಯ ಹಾಗೂ ಸಮಚಿತ್ತದಿಂದ ಎದುರಿಸಿದ ಶ್ರೀಮತಿ ಸೋನಿಯಾ ಗಾಂಧಿ, ರಾಹುಲ್ ಮತ್ತು ಪ್ರಿಯಾಂಕಾ ಇವರುಗಳ ದುಃಖ, ಯಾತನೆ ಮತ್ತು ಸಂಕಟದಲ್ಲಿ ನಾನು ನಿಮ್ಮೆಲ್ಲರೊಂದಿಗೆ ಭಾಗಿಯಾಗುತ್ತೇನೆ. ಈ ಮಾತುಗಳನ್ನು ಹೇಳಿ, ಈ ಮುಂದಿನ ನಿರ್ಣಯವನ್ನು ಮಂಡಿಸಲು ಸದನದ ಒಪ್ಪಿಗೆಯನ್ನು ಕೋರುತ್ತೇನೆ.

"ಪ್ರಾಚೀನ ವೈಭವಗಳೊಂದಿಗೆ ಆಧುನೀಕತೆಯನ್ನು ಮೇಳೈಸಿಕೊಂಡಂಥ ತನ್ನ ಕನಸಿನ ನವಭಾರತವನ್ನು ನಿರ್ಮಾಣ ಮಾಡುವ ಉದಾತ್ತ ಮತ್ತು ಪವಿತ್ರ ಧ್ಯೇಯಕ್ಕಾಗಿ ತನ್ನನ್ನೇ ಸಮರ್ಪಿಸಿಕೊಂಡಿದ್ದ ಆದಮ್ಯ ಚೇತನದ ಹಾಗೂ ಉಜ್ವಲ ಕಲ್ಪನೆಯ ನಾಯಕರಾದ ಶ್ರೀ ರಾಜೀವ್ ಗಾಂಧಿ ಅವರ ನಿಧನದಿಂದ ಆಘಾತಗೊಂಡು ದುಃಖ ತಪ್ತವಾಗಿರುವ ಈ ಸದನವು ಶೋಕ ಸಂತಾಪವನ್ನು ವ್ಯಕ್ತಪಡಿಸುತ್ತದೆ."

"ಈ ಸದನವು ಶ್ರೀ ರಾಜೀವ್ ಗಾಂಧಿಯವರಿಗೆ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ ಮತ್ತು ಭಾರತ ಮಾತೆಯ ತರುಣ ವಯಸ್ಸಿನ ಈ ಪುತ್ರನ ವಿರುದ್ಧ ಎಸಗಿದ ಘೋರ ಕೃತ್ಯವನ್ನು ಬಲವಾಗಿ ಖಂಡಿಸುತ್ತದೆ."

2. ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಉಮಾಶಂಕರ್ ದೀಕ್ಷಿತ್‌ರವರು ದಿನಾಂಕ 30-5-1991ರಂದು ನವದೆಹಲಿಯಲ್ಲಿ ನಿಧನರಾದರು. ಶ್ರೀಯುತರು ಕೇಂದ್ರದಲ್ಲಿ ವಸತಿ ಹಾಗೂ ಕಾಮಗಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಗೃಹ ಹಾಗೂ ಸಾರಿಗೆ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿ ಅವಿರತ ಸೇವೆ ಸಲ್ಲಿಸಿರುತ್ತಾರೆ.

1969ರಿಂದ ಸ್ವರ್ಗೀಯ ದೀಕ್ಷಿತ್‌ರವರ ಜೊತೆ ನಾನು ನಿಕಟವರ್ತಿಯಾಗಿ ಕೆಲಸ ಮಾಡಲು ಅವಕಾಶ ಒದಗಿತ್ತು. 1972ರಲ್ಲಿ ನಾನು ರಾಜ್ಯ ಸಂಪುಟದ ಸಚಿವನಾದ ಮೇಲೆ ದೀಕ್ಷಿತ್‌ರವರ ಜೊತೆಯಲ್ಲಿ ಆಗಿದಾಂಗ್ಯೆ ಸಮಾಲೋಚನೆ ಮಾಡುವುದು, ಮಾರ್ಗದರ್ಶನ ಪಡೆಯುವುದು ಒಂದು ಅಪೂರ್ವವಾದಂಥ ಅನುಭವವಾಗಿತ್ತು. ಶ್ರೀ ದೀಕ್ಷಿತ್‌ರವರ ಸರಳತೆ, ಇನ್ನೊಬ್ಬರ ದೃಷ್ಟಿಕೋನವನ್ನು ಅರ್ಥಮಾಡಿಕೊಳ್ಳುವ ಮನೋಭಾವನೆ ಅವರ ಕಡುವೈರಿಗಳಿಗೂ ಅವರ ಬಗ್ಗೆ ಅಪಾರವಾದ ಗೌರವವನ್ನು ಉಂಟುಮಾಡುತ್ತಿತ್ತು. ರಾಷ್ಟ್ರ ಸೇವೆಯಲ್ಲಿ ಐದು ದಶಕಗಳಿಗೂ ಹೆಚ್ಚು ತಮ್ಮ ಜೀವನವನ್ನು ತೇಯ್ದು ಕೊನೆಯ ಉಸಿರು ಇರುವವರೆಗೂ ರಾಷ್ಟ್ರ ಮತ್ತು ರಾಷ್ಟ್ರದ ಇತಿಹಾಸದಲ್ಲಿ ಹಾಸುಹೊಕ್ಕಾಗಿ ಬೆಳೆದ ಕಾಂಗ್ರೆಸ್ ಸಂಸ್ಥೆಯ ಹಿತಚಿಂತಕರಾಗಿ ತಮ್ಮ ಅಸುವನ್ನು ನೀಗಿದರು. ಅತ್ಯಂತ ಸೂಕ್ಷ್ಮ ಸನ್ನಿವೇಶದಲ್ಲಿ ನಮ್ಮ ರಾಷ್ಟ್ರದ ರಾಜಕಾರಣ ನಿಂತಿರುವಾಗ ದೀಕ್ಷಿತ್ ಅವರಂಥ ಅನುಭವದ ಮಾರ್ಗದರ್ಶನ ಇನ್ನೂ ಕೆಲವು ಕಾಲ ಸಿಕ್ಕಲಿಲ್ಲ ಎನ್ನುವ ವ್ಯಥೆ ನಮ್ಮೆಲ್ಲರದ್ದಾಗಿದೆ.

3. ವಿಧಾನ ಪರಿಷತ್‌ನ ಮಾಜಿ ಸಭಾಪತಿಯವರಾಗಿದ್ದ ಶ್ರೀ ಎಸ್.ಸಿ. ಎಡ್ಕೆರವರು ದಿನಾಂಕ 27.6.1991ರಂದು ಬಾಗಲಕೋಟೆಯಲ್ಲಿ ನಿಧನರಾದರು. ದಿವಂಗತರು ಮುಂಬೈ ವಿಧಾನ ಪರಿಷತ್‌ನ ಸದಸ್ಯರಾಗಿದ್ದು, ರಾಜ್ಯಗಳ ಪುನರ್ವಿಂಗಡಣೆಯ ನಂತರ ಮೈಸೂರು ವಿಧಾನ ಪರಿಷತ್‌ನ ಸದಸ್ಯರಾಗಿ 28.7.1966ರಿಂದ 10.6.1968ರವರೆಗೆ ವಿಧಾನ ಪರಿಷತ್‌ನ ಸಭಾಪತಿಯವರಾಗಿ ಸೇವೆ ಸಲ್ಲಿಸಿರುತ್ತಾರೆ.

4. ಮಾಜಿ ಸಚಿವರಾದ ಶ್ರೀ ಹೆಚ್.ಜಿ. ಚನ್ನಪ್ಪನವರು ದಿನಾಂಕ 29.6.1991ರಂದು ಬೆಂಗಳೂರಿನಲ್ಲಿ ನಿಧನರಾದರು. ಮಾಗಡಿ ವಿಧಾನಸಭಾ ಕ್ಷೇತ್ರದಿಂದ ಅವರು ವಿಧಾನ ಸಭೆಗೆ 1972ರಿಂದ 1977, 1983ರಿಂದ 1984 ಹಾಗೂ 1985ರಿಂದ 1989ರ ಅವಧಿಯಲ್ಲಿ ಮೂರು ಬಾರಿ ಆಯ್ಕೆ ಹೊಂದಿ ಸೇವೆ ಸಲ್ಲಿಸಿರುತ್ತಾರೆ. 1972ರಿಂದ 78ರವರೆಗೆ ಅವರ ಜೊತೆಯಲ್ಲಿ ಈ ಸದನದಲ್ಲಿ ಕೆಲಸ ಮಾಡುವ ಅವಕಾಶ ನನ್ನದಾಗಿದ್ದನ್ನು ಇಲ್ಲಿ ಸ್ಮರಿಸುತ್ತೇನೆ. ಶ್ರೀಯುತರ ಮೃದು ಸ್ವಭಾವ ಎಲ್ಲರ ಮೆಚ್ಚುಗೆಯನ್ನು ಪಡೆದಿತ್ತು.

5. ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ಹಾಗೂ ಮಾಜಿ ವಿಧಾನ ಸಭಾ ಸದಸ್ಯರೂ ಆಗಿದ್ದಂಥ ಶ್ರೀಮತಿ ರುಕ್ಮಣಿಯಮ್ಮ ಅವರು ದಿನಾಂಕ 15.6.1991ರಂದು ನಿಧನರಾದರು. ಶ್ರೀಮತಿಯವರು 1945ರಿಂದ 1949ರವರೆಗೆ ಪ್ರಜಾಪ್ರತಿನಿಧಿ ಸಭೆಯ

ಸದಸ್ಯರಾಗಿ ನಂತರ 1957ರಿಂದ 1962ರವರೆಗೆ ಹೊಸಕೋಟೆ, ದೇವನಹಳ್ಳಿ ಕ್ಷೇತ್ರದಿಂದ ವಿಧಾನಸಭಾ ಸದಸ್ಯರಾಗಿ ಆಯ್ಕೆ ಹೊಂದು ಸೇವೆ ಸಲ್ಲಿಸಿದ್ದರು.

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಬಸವಂತರಾವ್ ಬಸವನಗೌಡರು ದಿನಾಂಕ : 28-6-1991ರಂದು ನಿಧನರಾದರು. ಶ್ರೀಯುತರು 1952ರಿಂದ 1962, 1962ರಿಂದ 1967 ಹಾಗೂ 1972ರಿಂದ 1977ರ ಅವಧಿಯಲ್ಲಿ ವಿಧಾನಸಭೆಯ ಸದಸ್ಯರಾಗಿ, ಸಿಂಧನೂರು ಕ್ಷೇತ್ರವನ್ನು ಪ್ರತಿನಿಧಿಸಿ ಸೇವೆ ಸಲ್ಲಿಸಿರುತ್ತಾರೆ. 1972ರಿಂದ 1977ರ ಅವಧಿಯಲ್ಲಿ ಶ್ರೀ ಬಸವಂತರಾವ್‌ರವರು ಈ ಸದನದಲ್ಲಿದ್ದಾಗ, ಅವರ ಜೊತೆಯಲ್ಲಿ ನಾನು ಹೆಚ್ಚು ನಿಕಟವಾದ ಸಂಬಂಧವನ್ನು ರೂಢಿಸಿಕೊಂಡಿದ್ದೆನು. ಶ್ರೀಯುತರು ನಿಗರ್ವಿಗಳು, ರಾಜ್ಯದ ಹಿತಾಸಕ್ತಿಗಳಿಗೆ, ಕರ್ನಾಟಕದ ಒಗ್ಗೂಡುವಿಕೆಗೆ ಅವಿರತವಾದ ಶ್ರಮಪಟ್ಟಿದ್ದರು. ಮತ್ತು ಅದರಲ್ಲಿಯೂ ಸ್ಮರಿಸುವಂಥ ಕೆಲಸವನ್ನು ಮಾಡಿರುತ್ತಾರೆ.

ಮತ್ತೊಬ್ಬ ರಾಷ್ಟ್ರದ ಹಿರಿಯ ಮುತ್ಸದ್ದಿ, ಕಮ್ಯುನಿಸ್ಟ್ ಸಿದ್ಧಾಂತದ ಪ್ರವಾದಿ ಶ್ರೀಪಾದ್ ಅಮೃತ್ ಡಾಂಗೆಯವರು ನಿಧನರಾಗಿರುವುದು ರಾಷ್ಟ್ರದ ಸಾರ್ವಜನಿಕ ಜೀವನದಲ್ಲಿ ಮತ್ತು ನಮ್ಮ ಸೈದ್ಧಾಂತಿಕ ಚೌಕಟ್ಟಿನಲ್ಲಿ ಒಂದು ದೊಡ್ಡ ಶೂನ್ಯವನ್ನುಂಟುಮಾಡಿ ಕಣ್ಮರೆಯಾಗಿದ್ದಾರೆ. 1968ನೇ ಇಸವಿಯಲ್ಲಿ ನಾನು ಲೋಕಸಭೆಗೆ ಸದಸ್ಯನಾಗಿ ಹೋದಾಗ ಶ್ರೀ ಡಾಂಗೆಯವರು ಅಲ್ಲಿಯ ಪ್ರತಿಭಾನ್ವಿತ ಸದಸ್ಯರಾಗಿ, ಕಮ್ಯುನಿಸ್ಟ್ ಪಕ್ಷದ ನಾಯಕರಾಗಿದ್ದರು. ವಿಷಯಗಳನ್ನು ಅತ್ಯಂತ ಸೂಕ್ಷ್ಮವಾಗಿ, ಅರ್ಥವತ್ತಾಗಿ ಮತ್ತು ಅತ್ಯಂತ ಪ್ರಖರವಾಗಿ ಸರ್ಕಾರಕ್ಕೆ ಮತ್ತು ಸಭೆಗೆ ವಿವರಿಸತಕ್ಕಂಥ ಅಸಾಧ್ಯವಾದಂಥ ವಾಙ್ಮಯತೆಯನ್ನು ಶ್ರೀ ಡಾಂಗೆಯವರು ಪಡೆದಿದ್ದರು. ಸುಮಾರು 5 ದಶಕಗಳಿಗೂ ಹೆಚ್ಚು ಕಾಲ ಈ ರಾಷ್ಟ್ರದಲ್ಲಿ ಕಾರ್ಮಿಕರ ಸಂಘಟನೆಗೆ, ಕಮ್ಯುನಿಸ್ಟ್ ಸಿದ್ಧಾಂತದ ಪುಷ್ಟೀಕರಣಕ್ಕೆ ಅವರು ತಮ್ಮನ್ನೆ ತಾವೇ ಸಮರ್ಪಿಸಿಕೊಂಡಿದ್ದರು. ಅವರ ನಿಧನದಿಂದ, ನಮ್ಮ ದೇಶಕ್ಕೆ ಬಹಳ ದೊಡ್ಡ ನಷ್ಟವುಂಟಾಗಿದೆ ಎನ್ನುವುದನ್ನು ಈ ಸಭೆಗೆ ಅತ್ಯಂತ ನೊಂದ ಮನಸ್ಸಿನಿಂದ ತಿಳಿಸಲು ಇಚ್ಛೆಪಡುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರಾ : ಮಾನ್ಯ ಅಧ್ಯಕ್ಷರೇ, ಶ್ರೀ ಕರ್‌ಮರ್‌ಕರ್‌ರವರು, ಉತ್ತರ ಕರ್ನಾಟಕದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿ ಸೇವೆ ಸಲ್ಲಿಸಿ, ಇತ್ತೀಚೆಗೆ ನಿಧನ ಹೊಂದಿರುತ್ತಾರೆ. ಅವರ ಹೆಸರನ್ನೂ ಈ ಸಂತಾಪ ಸೂಚನೆಯಲ್ಲಿ ಸೇರಿಸಬೇಕಾಗಿ ವಿನಂತಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕರಮರ್‌ಕರ್‌ರವರು ನಮ್ಮ ರಾಜ್ಯದ ಸುಪುತ್ರರಲ್ಲಿ ಒಬ್ಬರು. ರಾಷ್ಟ್ರ ನಾಯಕರ ಅಗ್ರಪಂಕ್ತಿಗೆ ಸೇರಿದ ಹಿರಿಯ ತಲೆಯ ನಾಯಕರು. ನಾವು ಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಕಾಲದಲ್ಲಿಯೇ, ಶ್ರೀ ಕರಮರ್‌ಕರ್ ರವರು ರಾಜಕಾರಣದ ಬಹಳ ಎತ್ತರವನ್ನು ಸಾಧಿಸಿದ್ದರು. ಅವರು ಕರ್ನಾಟಕದ ಏಕೀಕರಣಕ್ಕೆ ತಮ್ಮ ಅಪೂರ್ವವಾದ ಕೊಡುಗೆಯನ್ನು ದಯಪಾಲಿಸಿದ್ದಾರೆ. ಕೇಂದ್ರದಲ್ಲಿ ಮಂತ್ರಿಗಳಾಗಿ, ರಾಜ್ಯದ ಹಿತಾಸಕ್ತಿಯನ್ನು ಮತ್ತು ರಾಷ್ಟ್ರದ ಹಿತಾಸಕ್ತಿಯನ್ನು ಕೂಡ ಕಾಪಾಡುವುದರಲ್ಲಿ ಮತ್ತು ಎತ್ತಿ ಹಿಡಿಯುವುದರಲ್ಲಿ ಶ್ರೀಯುತರು ಅಗ್ರಗಣ್ಯರಾಗಿದ್ದರು. ಗಾಂಧಿ ಶಕೆಯ ಹಲವು ಹಿರಿಯ ತಲೆಗಳು ಒಂದೊಂದಾಗಿ, ಒಂದೊಂದಾಗಿ ನಮ್ಮಿಂದ ಕಣ್ಮರೆಯಾಗುತ್ತಾ ಇವೆ. ಶ್ರೀ ಕರಮರ್‌ಕರ್‌ರವರು ನಮ್ಮ ರಾಜ್ಯಕ್ಕೆ, ರಾಷ್ಟ್ರಕ್ಕೆ ಸಲ್ಲಿಸಿರುವಂಥ ಸೇವೆಯನ್ನು ಅತ್ಯಂತ ವಿನೀತವಾಗಿ ಈ ಸಭೆಯ ಗಮನಕ್ಕೆ ತರಲಿಚ್ಛೆಪಡುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ದಿವಂಗತ ರಾಜೀವ್ ಗಾಂಧಿಯವರ ಅಕಾಲಿಕ ಮರಣದ ಬಗ್ಗೆ ಮಂಡಿತವಾದ ನಿರ್ಣಯವನ್ನು ಅನುಮೋದಿಸಿ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳಲು

ನಾನು ನಿಂತಿದ್ದೇನೆ. ನಾವು ನಮ್ಮ ಮಹಾನ್ ನಾಯಕರುಗಳನ್ನು ಒಬ್ಬೊಬ್ಬರನ್ನಾಗಿ ಕಳೆದುಕೊಳ್ಳುತ್ತಿದ್ದೇವೆ. ನಾನು ಒಂದು ಪಕ್ಷಕ್ಕೆ ಸೀಮಿತವಾಗಿ ಮಾತನಾಡುತ್ತಿಲ್ಲ. ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟ ಪೂಜ್ಯ ಮಹಾತ್ಮ ಗಾಂಧೀಜಿಯವರ ಮಹಾನಾಯಕತ್ವದಲ್ಲಿ ಶಾಂತಿಯ ಮುಖಾಂತರ ನಾವು ಪಡೆದಿರತಕ್ಕಂಥ ರಾಷ್ಟ್ರದಲ್ಲಿ ಇವತ್ತು ಹಿಂಸೆಗೆ ಬಲಿಯಾಗಿ ನಾಯಕರುಗಳನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ಅದು ಒಂದು ಕಡೆ ನಡೆಯುತ್ತಿಲ್ಲ. ಮತ್ತು ಇದು ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ. ಸುಮಾರಾಗಿ ಎಲ್ಲಾ ರಾಜಕೀಯ ಪಕ್ಷಗಳ ಸಾಕಷ್ಟು ಮುಖಂಡರುಗಳನ್ನು ರಾಷ್ಟ್ರದ ಹಲವಾರು ಭಾಗಗಳಲ್ಲಿ ನಾವು ಈಗಾಗಲೇ ಕಳೆದುಕೊಂಡಿದ್ದೇವೆ. ಈ ಒಂದು ವಿಚಾರದ ಬಗ್ಗೆ ನಾವು ತೀವ್ರವಾಗಿ ಗಮನಹರಿಸದಿದ್ದರೆ, ಈ ರಾಷ್ಟ್ರದಲ್ಲಿ ನಾವು ಗಳಿಸಿರತಕ್ಕಂಥ ಸ್ವಾತಂತ್ರ್ಯ ನಾವು ರೂಪಿಸಿರತಕ್ಕಂಥ ಜನತಂತ್ರ ಇದನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವುದಕ್ಕೆ ಬಳುವಳಿಯಾಗಿ ಅಥವಾ ಕೊಡುಗೆಯಾಗಿ ಭವಿಷ್ಯದ ಪೀಳಿಗೆಗೆ ಬಿಡತಕ್ಕಂಥಾದ್ದು, ಈ ಜವಾಬ್ದಾರಿಯನ್ನು ಹೊರಲು ಯಾರು ಕೂಡ ನಾಯಕತ್ವವನ್ನು ವಹಿಸಲು ಮುಂದೆ ಬಾರದೆ ಇರತಕ್ಕಂಥ ಪರಿಸ್ಥಿತಿ ಉದ್ಭವವಾಗಬಹುದು. ನಾವು ಇದರ ಬಗ್ಗೆ ಚಿಂತನೆ ಮಾಡಿದರೆ, ಈ ಒಂದು ಸಾವಿನಲ್ಲಿ ದುಃಖವನ್ನು ಕಾಣತಕ್ಕಂಥ ಸಂದರ್ಭ ಇದ್ದರೂ ಕೂಡ ಅದರ ಜೊತೆ ಜೊತೆಯಲ್ಲಿಯೇ ಭವಿಷ್ಯವನ್ನು ರೂಪಿಸತಕ್ಕಂಥ ಜವಾಬ್ದಾರಿ ನಮ್ಮೆಲ್ಲರ ಮೇಲೆ ಇದೆ, ಎಲ್ಲಾ ರಾಜಕೀಯ ಪಕ್ಷಗಳ ಮಿತ್ರರ ಮೇಲೆ ಇದೆ. ಈ ಸಂದರ್ಭದಲ್ಲಿ ರಾಜೀವ್ ಗಾಂಧಿಯವರ ಮರಣದಲ್ಲಿ ಮತ್ತೊಂದು ಸಾರಿ ಈ ವಿಚಾರವನ್ನು ನಾವು ನಮ್ಮ ಮೂಗಿಗೆ ಹಚ್ಚಿ ತಿಕ್ಕಿ ತಿಕ್ಕಿ ನೋಡತಕ್ಕಂಥ ಸಂದರ್ಭ ಒದಗಿ ಬಂದಿರತಕ್ಕಂಥಾದ್ದು ನಮ್ಮಂತಹ ರಾಷ್ಟ್ರಕ್ಕೆ ದುರಾದೃಷ್ಟಕರವಾದ ಸನ್ನಿವೇಶ. ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಡಿಸಿದ ಹಾಗೆ, ಮತ್ತೊಂದು ಸಾರಿ ಪ್ರಧಾನಿ ಮಂತ್ರಿಗಳಾಗಿ ಈ ರಾಷ್ಟ್ರದ ಜವಾಬ್ದಾರಿಯುತವಾದ ಸ್ಥಾನ ವಹಿಸಿ ಆಡಳಿತ ಕೊಡತಕ್ಕಂಥ ಸಂದರ್ಭ ಅವರ ಮುಂದೆ ಇತ್ತು ಎನ್ನತಕ್ಕಂಥ ರಾಜಕೀಯ ವಿದ್ಯಮಾನಗಳನ್ನು ನಾವು ಗಮನಿಸಿದರೆ ಫಲಿತಾಂಶವನ್ನು ಗಮನಿಸಿದರೆ ಯಾರೂ ಕೂಡ ಆ ಮಾತನ್ನು ಅಲ್ಲಗಳೆಯುವಂತಿಲ್ಲ. ತಾವು ಹೇಳತಕ್ಕಂಥ ಮಾತು ಎಲ್ಲರೂ ಒಪ್ಪತಕ್ಕಂಥ ಮಾತು. ಅದು ಏನೇ ಇರಲಿ, ಅಧಿಕಾರ ಬರಬಹುದು, ಅಧಿಕಾರ ಹೋಗಬಹುದು. ಶ್ರೀ ರಾಜೀವ್ ಗಾಂಧೀಯವರು ಅಧಿಕಾರ ನೋಡಿದ್ದರು. ಅಧಿಕಾರ ಕಳೆದುಕೊಂಡಿದ್ದರು. ಅಧಿಕಾರದ ರಾಷ್ಟ್ರದ ಜನತೆ ಕೊಟ್ಟರೆ ಬರುತ್ತದೆ. ಅದು ಯಾವುದೇ ಪಕ್ಷಕ್ಕಾದರೂ ಹೋಗುತ್ತದೆ. ಅಕಾಲಿಕ ಮರಣ ಬರಲಿ, ಆದರೆ ಈ ರೀತಿ ಬರಬಾರದಾಗಿತ್ತು. ಸಾಧಾರಣವಾಗಿ ಒಬ್ಬ ವ್ಯಕ್ತಿ ಖಾಯಿಲೆ ಬಿದ್ದು, ಜೀವ ಬಿಟ್ಟರೆ ಆ ವಿಚಾರ ಬೇರೆ. ನಮ್ಮಂತಹ ರಾಷ್ಟ್ರದಲ್ಲಿ ರಾಜಕಾರಣದ ಬಗ್ಗೆ ವಿಚಾರ ಮಾಡತಕ್ಕಂಥ ಸಂದರ್ಭ ಬಂದಿದೆ ಎಂದು ನಾನು ಭಾವಿಸುತ್ತೇನೆ. ನಾವು ನೀವು ಎಲ್ಲರೂ ಸೇರಿ ಜನರ ಮಧ್ಯೆ ನುಗ್ಗಿಕೊಂಡು ಹೋಗತಕ್ಕಂಥ ರಾಜಕಾರಣ ಅಂದರೆ ಎಲ್ಲಾ ಪಕ್ಷದವರು ಜನರ ಮಧ್ಯೆದಲ್ಲಿ ಹುಟ್ಟಿ ಬಂದಿರತಕ್ಕಂಥವರು, ನಮ್ಮಂತಹ ರಾಜಕಾರಣಿಗಳು ಜನರ ಮಧ್ಯೆ ಪ್ರಾಣ ಕಳೆದುಕೊಳ್ಳಬೇಕಾಗುತ್ತದೆ. ಸಮಸ್ಯೆಯಲ್ಲಿಯೇ ಹುಟ್ಟಿ ಬಂದಿರತಕ್ಕಂಥ ನಮ್ಮಂತಹ ರಾಜಕಾರಣಿಗಳು ಅವರ ಮಧ್ಯೆದಲ್ಲಿಯೇ ಕೊನೆಗೊಳ್ಳಬೇಕಾಗುತ್ತದೆಯೋ ಏನೋ. ಈ ಮಾತನ್ನು ಮೂಲಭೂತವಾಗಿ ನಾವು ಒಪ್ಪಿ ರಾಜಕಾರಣಕ್ಕೆ ಬಂದಿದ್ದೇವೆ. ಎಲ್ಲಾ ಪಕ್ಷದವರು ಒಪ್ಪಿ ಬಂದಿದ್ದೇವೆ. ಈ ಸಂದರ್ಭದಲ್ಲಿ ಅಕಾಲ ಮರಣ ಅನಿವಾರ್ಯವಾಗುವುದಾದರೆ ನಾವೆಲ್ಲರೂ ಆಗೋಣ. ಅದು ಸಾಧ್ಯವೇ? ಎನ್ನುವ ಪ್ರಶ್ನೆಗೆ ಭವಿಷ್ಯಕ್ಕೆ ಉತ್ತರ ಕೊಡುವುದಕ್ಕೆ ಯಾವ ರೀತಿಯಲ್ಲಿ ವಿಚಾರ ಮಾಡಬೇಕೆನ್ನುವುದನ್ನು ಬಿಟ್ಟು ಹೋಗಬೇಕಾಗುತ್ತದೆ.

ಈ ಒಂದು ದೃಷ್ಟಿಯಿಂದ ನಾನು ಆ ವಿಚಾರಕ್ಕೆ, ಅದರ ಮಥನಕ್ಕೆ ಈ ಸಂದರ್ಭದಲ್ಲಿ ವಿವರವಾಗಿ ಹೋಗದೇನೇ, ಇವತ್ತು ಯಾರು ಯಾರು ಈ ರೀತಿ

ಅಕಾಲ ಮರಣಕ್ಕೆ ತುತ್ತಾಗಿದ್ದಾರೆ, ಯಾವುದೇ ಪಕ್ಷದವರಿರಬಹುದು ಅವರನ್ನು ನಾನು ಸ್ಮರಿಸಿಕೊಳ್ಳುತ್ತೇನೆ. ಇದೇ ಸಂದರ್ಭದಲ್ಲಿ ಮಹಾನ್ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದಂಥ ರಾಜೀವ್ ಗಾಂಧಿಯವರೂ ಕೂಡ ಸಾಮಾನ್ಯವಾಗಿ ಜನರ ಮಧ್ಯೆ ಇರತಕ್ಕಂಥ ಸಂದರ್ಭದಲ್ಲಿ ಒಬ್ಬ ಮಹಾನ್ ವ್ಯಕ್ತಿ ಜೀವವನ್ನು ಬಿಡತಕ್ಕಂಥ ಸಂದರ್ಭ. ಅವರಿಗೆ ತಾನು ಸಾಯುತ್ತೇನೆಂದು ಗೊತ್ತಾಗಲೇ ಇಲ್ಲ. ಅವರು ಸಾಯುತ್ತೇನೆಂದು ಕೂಡಾ ಗೊತ್ತಾಗದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಜೀವವನ್ನು ಬಿಟ್ಟಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ರಾಷ್ಟ್ರದ, ರಾಜ್ಯದಲ್ಲಿರತಕ್ಕಂಥ ಎಲ್ಲರೂ ಸೇರಿ ವಿಚಾರ ಮಾಡತಕ್ಕಂಥದ್ದು, ಮುಂದೆ ಚುನಾವಣೆ ಬರಬಹುದು, ಚುನಾವಣೆ ಕಾಲ ಇರಬಹುದು. ಮತ್ತೊಂದು ಕಾಲ ಇರಬಹುದು, ನಾವು ಯಾವ ರೀತಿ ಹೋಗಬೇಕಾಗುತ್ತದೆ ಎನ್ನುವ ವಿಚಾರದಲ್ಲಿ ಮುಕ್ತ ಮನಸ್ಸಿನಿಂದ ರಾಷ್ಟ್ರ ಮಟ್ಟದಲ್ಲಿ ವಿಚಾರ ಮಾಡಿ ಇದಕ್ಕೆ ಒಂದು ರೂಪ ಕೊಡತಕ್ಕಂಥ ಅವಶ್ಯಕತೆ ಇದೆಯೆಂದು ನಾನು ಭಾವಿಸಿದ್ದೇನೆ. ಇದು ಭವಿಷ್ಯ ದೃಷ್ಟಿ. ಅದೇನೇ ಇರಲಿ, ಆ ವಿವರಗಳು ಈಗ ಬೇಡ. ಆದರೆ ಚಿಂತನೆ ಅತಿ ಅಗತ್ಯವೆಂದು ನಾನು ಭಾವಿಸಿದ್ದೇನೆ. ಈ ಸಂದರ್ಭದಲ್ಲಿ ಅಲಿಪ್ತ ರಾಷ್ಟ್ರಗಳಿಗೆ ಮಹಾನ್ ನಾಯಕತ್ವವನ್ನು ನಮ್ಮ ರಾಷ್ಟ್ರ ಕೊಟ್ಟಿದೆ. ಅದರ ಅಧ್ಯಕ್ಷರಾಗಿ ಹಿಂದಿದ್ದವರು, ರಾಜೀವ್ ಗಾಂಧಿಯವರೂ ಕೂಡಾ ಜವಾಬ್ದಾರಿಯನ್ನು ಹೊತ್ತು ಪ್ರಪಂಚ ಶಾಂತಿಗೆ ಶ್ರಮಿಸತಕ್ಕಂಥ ಒಂದು ಸಂದರ್ಭ ಇದ್ದರೆ, ಈ ಅಲಿಪ್ತ ರಾಷ್ಟ್ರಗಳ ಸದಸ್ಯರಾಗಿದ್ದಂಥ ರಾಷ್ಟ್ರಗಳು ಆರ್ಥಿಕ ಮತ್ತು ಮತ್ತೊಂದು ಕ್ಷೇತ್ರದಲ್ಲಿ ಮೇಲಕ್ಕೆ ಎದ್ದು ಬರತಕ್ಕಂಥ ವಿಚಾರದಲ್ಲಿ ದೊಡ್ಡ ಜವಾಬ್ದಾರಿಯನ್ನು ಹೊತ್ತು ತಮ್ಮದೇ ಆಗಿರತಕ್ಕಂಥ ಕೊಡುಗೆಯನ್ನು ಅಥವಾ ಸೇವೆಯನ್ನು ಇದರ ಮುಖಾಂತರ ಪ್ರಪಂಚಕ್ಕೆ ಕೊಟ್ಟಿದ್ದಾರೆ. ಅಭಿವೃದ್ಧಿಶೀಲ ರಾಷ್ಟ್ರಗಳು ಏನಿವೆ ಈ ರಾಷ್ಟ್ರಗಳಿಗೆ ಸ್ಪಷ್ಟವಾದ ಗುರಿಯನ್ನಿತ್ತು, ದಿಕ್ಸೂಚಿಯನ್ನು ಹಾಕಿ ಮೇಲ್ಪಂಕ್ತಿಯನ್ನು ಹಾಕಿಕೊಟ್ಟು ಹೋದಂಥವರಲ್ಲಿ ಶ್ರೀಮಾನ್ ರಾಜೀವ್ ಗಾಂಧಿಯವರು ಅಗ್ರಮಾನ್ಯರು. ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಗಳಿಸಿ ಇವತ್ತು ನಮ್ಮ ರಾಷ್ಟ್ರವನ್ನು ತುಂಬಾ ಎತ್ತರದಲ್ಲಿ ಇಟ್ಟು ಹೋಗಿದ್ದಾರೆ. ರಾಷ್ಟ್ರೀಯ ಮಟ್ಟದಲ್ಲಿ ಇರತಕ್ಕಂಥ ನಮ್ಮ ಸಮಸ್ಯೆಗಳು ಹತ್ತೆಂಟು ಹಲವಾರು ಹಿಂದೆ ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಂಥ ಕಾಲದಲ್ಲಿ ಇರತಕ್ಕಂಥ ಸಮಸ್ಯೆಗಳು ಇವತ್ತೂ ಇವೆ. ಮತ್ತೊಂದು ಪಕ್ಷದ ಅಧಿಕಾರ ಇರಬಹುದು. 1989ರ ನಂತರ ಬಂದಿರತಕ್ಕಂಥ ಪಕ್ಷ ಇರಬಹುದು. ಆ ಸಮಸ್ಯೆಗಳು ಅಷ್ಟು ಸುಲಭವಾಗಿ ಬಿಡಿಸತಕ್ಕಂಥ ಸಮಸ್ಯೆಗಳಲ್ಲ ಎನ್ನತಕ್ಕಂಥಾದ್ದು ಇವತ್ತಾಗಲೆ ಎದ್ದು ನಮಗೆಲ್ಲಾ ಕಂಡು ಬಂದಿವೆ. ಇದರಲ್ಲಿ ಯಾರೊಬ್ಬರ ತಪ್ಪನ್ನು ಹುಡುಕತಕ್ಕಂಥ ವಿಚಾರ ಅಲ್ಲ. ಪಂಜಾಬ್ ಇರಬಹುದು, ಜಮ್ಮು ಕಾಶ್ಮೀರ ಇರಬಹುದು, ಅಸ್ಸಾಂ ಇರಬಹುದು, ಶ್ರೀಲಂಕಾ ಮತ್ತು ನಮಗೆ ಇರತಕ್ಕಂಥ ಸಮಸ್ಯೆ ಇರಬಹುದು, ಈ ಎಲ್ಲಾ ಸಮಸ್ಯೆಗಳು ಬರೀ ಒಂದು ಪಕ್ಷೀಯವಾಗಿ ನೋಡತಕ್ಕಂಥ ಸಮಸ್ಯೆಗಳಾಗಿ ಉಳಿದಿಲ್ಲ, ಇವು ಪಕ್ಷಾತೀತವಾಗಿ ನೋಡತಕ್ಕಂಥ ಸಮಸ್ಯೆಗಳಾಗಿ ತಮ್ಮದೇ ಆಗಿರತಕ್ಕಂಥ ಬೃಹತ್ ಆಕಾರವನ್ನಾಗಿ ಮಾಡಿಟ್ಟುಕೊಂಡು ಹೋಗಿವೆ. ಆದ್ದರಿಂದ ನಾವೆಲ್ಲರೂ ಸೇರಿ ನಮ್ಮೆಲ್ಲರ ತಲೆಗಳನ್ನು ಒಟ್ಟಿಗೆ ಇಟ್ಟು ವಿಚಾರ ಮಾಡತಕ್ಕಂಥ ಸಂದರ್ಭ ಇದೆ ಎನ್ನತಕ್ಕಂಥ ಮಾತನ್ನು ಪೂರ್ವಭಾವಿಯಾಗಿ ಅಭ್ಯಾಸ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ಹೇಳುತ್ತೇನೆ. ಈ ಒಂದು ದೃಷ್ಟಿಯಿಂದ ಅಖಂಡ ದೇಶಪ್ರೇಮದ ಹಿನ್ನೆಲೆಯಲ್ಲಿ ಈ ಜಟಿಲ ಮತ್ತು ಕ್ಲಿಷ್ಟ ಅಥವಾ ಕಷ್ಟ ಸಮಸ್ಯೆಗಳಿಗೆ ಪರಿಹಾರವನ್ನು ಕಂಡು ಹಿಡಿಯತಕ್ಕಂಥ ವಿಚಾರದಲ್ಲಿ ತಮ್ಮದೇ ಆಗಿರತಕ್ಕಂಥ ವಿಚಾರ ಧಾರೆಯ ಹಿನ್ನೆಲೆಯಲ್ಲಿ ಪ್ರಾಮಾಣಿಕ ಪ್ರಯತ್ನದ ಮುಖಾಂತರ ಅವರು ಪ್ರಯತ್ನ ಮಾಡಿರುವುದು ಶ್ಲಾಘನೀಯ. ಈ ಸಮಸ್ಯೆಗೆ ಪರಿಹಾರ ಪ್ರತ್ಯೇಕ. ಅದರ ವಿಶ್ಲೇಷಣೆ ಈ ಸಂದರ್ಭದಲ್ಲಿ ಬೇಕಾಗಿಲ್ಲ. ಆದರೆ ಇವತ್ತು ನಾವೆಲ್ಲರೂ ಸೇರಿ ತ್ಯಾಗದ ಮನೋಭೂಮಿಕೆಯ ಆಧಾರದ ಮೇಲೆ ಸಮಸ್ಯೆಗೆ ಪರಿಹಾರವನ್ನು ಶಾಂತಿ ಮುಖಾಂತರ ಕಂಡುಹಿಡಿಯತಕ್ಕಂಥ ವಿಚಾರ

ಧಾರೆಗಳು ಇದರಲ್ಲಿ ಅಡಗಿದೆ ಎಂಬ ಅಂಶವನ್ನು ನಾವು ಮರೆಯಬಾರದು. ಈ ಸಂದರ್ಭದಲ್ಲಿ ಇಂಥಾ ಮಹಾನ್ ನಾಯಕತ್ವವನ್ನು ಕೊಟ್ಟು ಹೋಗಿದ್ದಾರೆ. ಇವತ್ತು ಜವಹಾರ್ ರೋಜ್ ಗಾರ್ ಯೋಜನೆಯನ್ನು ಜಾರಿಗೆ ಕೊಡತಕ್ಕಂಥ ರೀತಿ ನೀತಿಯಲ್ಲಿ ಭಿನ್ನಾಭಿಪ್ರಾಯ ಇರಬಹುದು. ಅದು ಸಹಜವಾಗಿ ಇರುತ್ತದೆ. ಆದರೆ ಇವತ್ತು ಬಡತನ ರೇಖೆಯ ಕೆಳಗಿರತಕ್ಕಂಥ ಜನ ಕೋಟಿ ಏನಿದೆ ಅವರ ಆರ್ಥಿಕ ಸಮಸ್ಯೆ, ಜೀವನ ಮಟ್ಟ ಮೇಲಕ್ಕೆ ಎದ್ದುಬರಲಿ ಎನ್ನತಕ್ಕಂಥ ಹಿರಿದಾಸೆ ಮಾನ್ಯ ರಾಜೀವ್ ಗಾಂಧಿಯವರದಾಗಿತ್ತು. ಅಂಥಾ ಹತ್ತೆಂಟು ಹಲವಾರು ಕಾರ್ಯಕ್ರಮಗಳನ್ನು ಅವರು ನೀಡಿ ಹೋಗಿದ್ದಾರೆ. ಆದ್ದರಿಂದ ಅವರು, ಈ ವರ್ಗವನ್ನು ಮೇಲಕ್ಕೆ ಎತ್ತತಕ್ಕಂಥ ವಿಚಾರದಲ್ಲಿ ಅಪ್ರತಿಮ ಪ್ರೇಮ, ಸಿದ್ಧಿ, ಆ ವರ್ಗದ ಬಗ್ಗೆ ಇಟ್ಟಿರತಕ್ಕಂಥ ನಂಬಿಕೆ, ಹೋರಾಟವು ನಿಜವಾಗಲೂ ಜನಮೆಚ್ಚಿಕೆಯಾಗಿದೆ ಹಾಗೂ ಎಲ್ಲರ ಮನಸ್ಸಿಗೆ ಒಪ್ಪಿಗೆಯಾದವು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಮರೆಯಬಾರದು. ಅವರ ತಾಯಿ ಶ್ರೀಮತಿ ಇಂದಿರಾ ಗಾಂಧಿಯವರು ಮತ್ತು ಮನೆತನ, ತಾವು ಹೇಳಿರುವ ಹಾಗೆಯೇ ಈ ಹಿನ್ನೆಲೆಯನ್ನು ಪಡೆದಿದೆ. ಅದೇ ರೀತಿಯಾಗಿ ಅವರ ಕಾರ್ಯಕ್ರಮಗಳೂ ಕೂಡ ಇವೆ. ರಾಷ್ಟ್ರ ಪ್ರೇಮ ಎನ್ನತಕ್ಕಂಥಾದ್ದು ಅದು ತನ್ನದೇ ಆಗಿರತಕ್ಕಂಥ ವೈಶಾಲ್ಯತೆಯನ್ನು ಇಂಥಾ ಜೀವಗಳ ಮುಖಾಂತರ ಮತ್ತೊಂದು ಸಾರಿ ಪಡೆದಿದೆ ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಆಡಿ, ಅವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ಈ ಸಂದರ್ಭದಲ್ಲಿ ಸಮರ್ಪಣೆ ಮಾಡುತ್ತಿದ್ದೇನೆ. ನಾಲ್ಕು ದಿನಗಳ ಮುಂಚೆ ಅವರ ಧರ್ಮಪತ್ನಿಯವರನ್ನು ನಾನು ಭೇಟಿಯಾಗಿದ್ದೆ. ಖುದ್ದಾಗಿ ನಾನು ಶ್ರದ್ಧಾಂಜಲಿಯನ್ನು ಅರ್ಪಿಸಿದ್ದೇನೆ. ಇವತ್ತು ನಾವು ಏನು ಶ್ರದ್ಧಾಂಜಲಿಯನ್ನು ಅರ್ಪಣೆ ಮಾಡುತ್ತಿದ್ದೇವೆ, ಅದೇ ರೀತಿಯಾಗಿ ಹಲವಾರು ಭಾರಿ ನಾವು ಮಾಡಿದ್ದೇವೆ. ಆದರೆ ಆ ನೋವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಅವರ ಕುಟುಂಬಕ್ಕೆ ಬರಬೇಕಾಗಿದೆ, ಯಾರೇ ಇರಬಹುದು. ಅವರ ಮಕ್ಕಳಿಗೂ ಕೂಡ ನೋವನ್ನು ತಡೆದುಕೊಳ್ಳತಕ್ಕಂಥ ಶಕ್ತಿ ಬರಬೇಕಾಗಿದೆ. ಯಾರನ್ನಾದರೂ ದಿಗ್ಭ್ರಮರಾಗಿ ಮಾಡಿರತಕ್ಕ ಸಂದರ್ಭ ಇದು. ನಾವು ಪರಿಸ್ಥಿತಿಯನ್ನು ನೋಡಿದರೆ ಗೊತ್ತಾಗುತ್ತದೆ. ಅದೇ ರೀತಿಯಾಗಿ ನಮ್ಮ ದೇಶದಲ್ಲಿ 108 ಕುಟುಂಬಗಳು ಇದೇ ರೀತಿಯಾಗಿ ಆಗಿಬಿಟ್ಟಿದ್ದಾವೆ. ಈ ಕಾರ್ಯಕ್ಕೆ ಬಲಿ ಆಗಿಬಿಟ್ಟಿವೆ. ಆದ್ದರಿಂದ ಇವತ್ತು ಶ್ರೀಮತಿ ಸೋನಿಯಾ ಗಾಂಧೀ ಮತ್ತು ಅವರ ಮಕ್ಕಳು ಪ್ರಿಯಾಂಕ ಹಾಗೂ ರಾಹುಲ್ ಅವರಿಗೆ ರಾಜೀವ್ ಗಾಂಧಿಯವರ ಅಗಲಿಕೆಯಿಂದ ಉಂಟಾಗಿರತಕ್ಕ ನೋವು, ದುಃಖವನ್ನು ತಡೆದುಕೊಳ್ಳತಕ್ಕ ಶಕ್ತಿ ಮತ್ತೊಮ್ಮೆ ಬರಲಿ ಎನ್ನತಕ್ಕ ತಮ ಮಾತನ್ನು ಅನುಮೋದನೆ ಮಾಡಿ ಆ ಮಾತನ್ನು ನಾನೂ ಕೂಡ ಆಡುತ್ತಿದ್ದೇನೆ ಇದು ನಾವೆಲ್ಲರೂ ಸೇರಿ ಈ ಸಂದರ್ಭದಲ್ಲಿ ಆಡತಕ್ಕ ಜವಾಬ್ದಾರಿಯ ಮಾತು ಇವತ್ತು ಅವರ ಆತ್ಮಕ್ಕೆ ಮತ್ತೊಂದು ಸಾರಿ ಶ್ರದ್ಧಾಂಜಲಿಯನ್ನು ಸಮರ್ಪಣೆ ಮಾಡಿ ನೋವನ್ನು ತಡೆದುಕೊಳ್ಳತಕ್ಕ ಶಕ್ತಿ ಅವರ ಕುಟುಂಬಕ್ಕೆ ಬರಲಿ ಎಂದು ಮತ್ತೊಮ್ಮೆ ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇದೇ ಸಂದರ್ಭದಲ್ಲಿ ಶ್ರೀಮಾನ್ ಉಮಾಶಂಕರ್ ದೀಕ್ಷಿತ್ ಅವರ ವಿಚಾ ಹೇಳಬೇಕಾಗುತ್ತದೆ. ಅವರು ನಮ್ಮ ರಾಜ್ಯದ ರಾಜ್ಯಪಾಲರಾಗಿದ್ದರು. ಕೇಂದ್ರದ ಸಚಿವರೂ ಸಹ ಆಗಿದ್ದರು. ಇವತ್ತು ಅವರ ಆತ್ಮಕ್ಕೂ ಕೂಡ ಶ್ರದ್ಧಾಂಜಲಿಯನ ಸಮರ್ಪಣೆ ಮಾಡಿ ಅವರ ಕುಟುಂಬಕ್ಕೆ ಕೂಡ ದುಃಖವನ್ನು ಭರಿಸತಕ್ಕ ಶ ಬರಲಿ ಎಂದು ಹೇಳುತ್ತಿದ್ದೇನೆ. ಶ್ರೀಮಾನ್ ಎಸ್.ಸಿ. ಎಡ್ಕೆ. ಅವರ ಸಂಪರ್ಕ ನನಗೆ ಅಷ್ಟಾಗಿ ಇಲ್ಲ. ನಾವೆಲ್ಲ ಇತ್ತೀಚಿನ ರಾಜಕಾರಣಿಗಳು. ನಮಗೆ ಆ ಸಂದರ್ಭದ ಅಷ್ಟೊಂದು ಸಂಪರ್ಕ ಬಂದಿಲ್ಲ. 1967 ನೇ ಇಸವಿಯಲ್ಲಿ ನಾನು ಶಾಸನಸಭ ಸದಸ್ಯನಾಗಿ ಬಂದಾಗ ಅವರು ಇದ್ದರು ಎನ್ನುವುದು ಅವರು ಇದ್ದಂತಹ ಅವಧಿಯನ ನೋಡಿದರೆ ನಮಗೆ ಗೊತ್ತಾಗುತ್ತದೆ. ಅವರ ಸಂಪರ್ಕ ನಮಗೆ ಅಷ್ಟೊಂದ

ಬಂದಿರಲಿಲ್ಲ. ಆದರೂ ಸಹ ಅವರ ಸೇವೆಯನ್ನು ನಾವು ಸ್ಮರಿಸಬೇಕಾಗುತ್ತದೆ. ಶ್ರೀಮಾನ್ ಹೆಚ್.ಜಿ.ಚನ್ನಪ್ಪನವರು ಬಹಳ ಪರಿಚಿತರು. ಬೆಂಗಳೂರಿನ ಪಕ್ಕದ ಕ್ಷೇತ್ರ ಮಾಗಡಿಯವರು. ಕೆಲವು ಕಾಲ ಸಚಿವರೂ ಆಗಿದ್ದವರು. ಅವರು ಅನೇಕ ವರ್ಷಗಳ ಕಾಲದವರೆಗೆ ಸದಸ್ಯರಾಗಿದ್ದವರು. ಅವರ ಅಗಲಿಕೆ ನಿಜವಾಗಿಯೂ ನಮ್ಮೆಲ್ಲರಿಗೂ ದುಃಖವನ್ನು ತರತಕ್ಕ ಸಂದರ್ಭ ಆಗಿದೆ. ಶ್ರೀಮತಿ ರುಕ್ಮಿಣಿಯಮ್ಮನವರು ಎಂಎಲ್ಎ ಆಗಿದ್ದವರು ಹಾಗೂ ಬೇರೆ ಬೇರೆ ಸ್ಥಾನವನ್ನು ಪಡೆದಿದ್ದಂತಹವರು. ಶ್ರೀಮಾನ್ ಬಸವಂತರಾವ್ ಬಸವನಗೌಡ ಚನ್ನೂರ್ ಅವರು ನನಗೆ ಚೆನ್ನಾಗಿ ಗೊತ್ತು. ಬಹಳ ಚೆನ್ನಾಗಿ ಪರಿಚಯ ಇದ್ದಂತಹವರು. ನಂತರ ಶ್ರೀಮಾನ್ ಎಸ್.ಎ. ಡಾಂಗೆ ಅವರು. ನಾವು ರಾಜಕಾರಣದಲ್ಲಿ ಒಂದೊಂದು ವಿಚಾರಧಾರೆಗೆ ಒಬ್ಬೊಬ್ಬರನ್ನು ಇಟ್ಟುಕೊಳ್ಳುತ್ತೇವೆ, ಇದು ಸಹಜ. ಕಮ್ಯುನಿಸ್ಟ್ ಸಿದ್ಧಾಂತ ಕಾಂಗ್ರೆಸ್ ಸಿದ್ದಾಂತ ಇತ್ಯಾದಿ ಸಿದ್ದಾಂತಗಳೇನಿವೆ ಅವುಗಳಲ್ಲಿ ಕಾಂಗ್ರೆಸ್ ಸಿದ್ದಾಂತ ನಮಗೆ ಒಪ್ಪಿಗೆಯಾದರೆ ಸಮಾಜವಾದ ಸಿದ್ದಾಂತ ಮತ್ತೊಬ್ಬರಿಗೆ ಒಪ್ಪಿಗೆಯಾಗಬಹುದು. ಮತ್ತೊಬ್ಬರಿಗೆ ಕಮ್ಯುನಿಸ್ಟ್ ಸಿದ್ಧಾಂತ ಒಪ್ಪಿಗೆಯಾಗಬಹುದು. ಹೀಗೆ ವೈವಿಧ್ಯತೆಯನ್ನು ಪಡೆದಿರತಕ್ಕಂಥಹ ಸಮಾಜದಲ್ಲಿ ಇದು ಸ್ವಾಗತ, ನಮ್ಮಂತಹ ರಾಷ್ಟ್ರದ ರಾಜಕಾರಣದಲ್ಲಿ ಕೂಡ ಉಂಟು. ಅಪ್ರತಿಮ ವೀರರಾಗಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಮೇಲ್ಮಟ್ಟಕ್ಕೆ ತರತಕ್ಕ ವಿಚಾರದಲ್ಲಿ ಹೋರಾಟವನ್ನು ಮಾಡಿರತಕ್ಕಂಥವರು ಶ್ರೀಮಾನ್ ಡಾಂಗೆ ಅವರು. ಅವರು ಕಾರ್ಮಿಕ ಮುಖಂಡರಾಗಿ ರಾಷ್ಟ್ರದ ಮತ್ತು ಅಂತರಾಷ್ಟ್ರೀಯ ಖ್ಯಾತಿಯನ್ನು ಗಳಿಸಿರತಕ್ಕಂಥವರು. ಅವರ ಅಗಲಿಕೆಯಿಂದ ಆ ಸಿದ್ದಾಂತದ ಜವಾಬ್ದಾರಿಯನ್ನು ಹೊತ್ತಿರತಕ್ಕ ಅವರ ಮಿತ್ರರಿಗಷ್ಟೇ ಅಲ್ಲ, ನಮ್ಮೆಲ್ಲರಿಗೂ ಕೂಡ ಇವತ್ತು ದೊಡ್ಡ ಆಘಾತವನ್ನು ಉಂಟು ಮಾಡಿದೆ. ಶ್ರೀಮಾನ್ ಡಿ.ಪಿ. ಕರ್‌ಮರ್‌ಕರ್ ಅವರು ನಮ್ಮ ಹುಬ್ಬಳ್ಳಿಯವರು, ಉತ್ತರ ಕರ್ನಾಟಕ ಭಾಗದವರು. ನಮ್ಮ ಕರ್ನಾಟಕ ರಾಜ್ಯದವರು. ಅವರೂ ಕೂಡ ದೇಶಪ್ರೇಮಿಗಳು. ಕೇಂದ್ರದ ಸಚಿವರಾಗಿ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಕೂಡ ಭಾಗಿ ಆಗಿದ್ದಂತಹವರು. ಹೀಗೆ ಹಲವಾರು ಜನ ಸನ್ಮಿತ್ರರನ್ನು ಈ ಸಂದರ್ಭದಲ್ಲಿ ನಾವು ಕಳೆದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಅವರೆಲ್ಲರ ಆತ್ಮಕ್ಕೆ ಶ್ರದ್ಧಾಂಜಲಿಯನ್ನು ನಾನು ಸಮರ್ಪಣೆ ಮಾಡಿ, ಅವರ ಕುಟುಂಬದವರಿಗೆಲ್ಲರಿಗೂ ಈ ನೋವನ್ನು ತಡೆದುಕೊಳ್ಳತಕ್ಕ ಶಕ್ತಿ ಬರಲಿ ಎನ್ನತಕ್ಕ ಮಾತನ್ನು ಆಡಿ, ಈ ಸಂದರ್ಭದಲ್ಲಿ ಈ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡುತ್ತೇನೆ. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ. ವಂದನೆಗಳು.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಈ ದಿವಸದ ಸಂತಾಪ ಸೂಚಕ ನಿರ್ಣಯದಲ್ಲಿ ತಾವು ವ್ಯಕ್ತಮಾಡಿರತಕ್ಕಂಥ ಅಭಿಪ್ರಾಯಗಳನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ, ನನ್ನ ಧ್ವನಿಯನ್ನು ಈ ಮೂಲಕ ತಮ್ಮ ಅಭಿಪ್ರಾಯಗಳೊಂದಿಗೆ ಕೂಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. 1991ರಲ್ಲಿ ನಡೆದ ರಾಷ್ಟ್ರೀಯ ಚುನಾವಣೆ ಬಹಳ ಜನರ ಮನಸ್ಸಿನಲ್ಲಿ ಹಿಂಸೆಯಿಂದ ಕೂಡಿರುತ್ತದೆ ಎಂಬ ಒಂದು ಶಂಕೆ ಇತ್ತು. ಆದರೆ ಈ ಶಂಕೆಯು ಶ್ರೀಮಾನ್ ರಾಜೀವಗಾಂಧೀಯವರಂಥ ಒಬ್ಬ ಹಿರಿಯ ರಾಷ್ಟ್ರ ನಾಯಕನನ್ನು ಆಹುತಿ ತೆಗೆದುಕೊಳ್ಳತಕ್ಕಂಥ ಪರಾಕಾಷ್ಠತೆಯನ್ನು ಮುಟ್ಟುತ್ತದೆ ಎಂದು ನಾವು ಯಾರೂ ನಿರೀಕ್ಷೆ ಮಾಡಿರಲಿಲ್ಲ. ನಮ್ಮ ನಿರೀಕ್ಷೆ ಮೀರಿ ದೇಶದಲ್ಲಿ ಒಂದು ಬಹಳ ದೊಡ್ಡ ದುರಂತ ಸಂಭವಿಸಿದೆ. ಜೊತೆಗೆ ಜನತಂತ್ರದ ವ್ಯವಸ್ಥೆಯನ್ನು ಮತ್ತು ಅದನ್ನು ನಡೆಸಿಕೊಂಡು ಹೋಗತಕ್ಕಂಥ ರೀತಿಗೆ ಒಂದು ಸವಾಲನ್ನು ಎಸೆದಿದೆ. ಯಾರು ಶ್ರೀಮಾನ್ ರಾಜೀವ್ ಗಾಂಧಿಯವರನ್ನು ಉಳಿಸಬಹುದಾಗಿತ್ತು? ನಮ್ಮಿಂದ ಅವರನ್ನು ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ, ಅಂದಿದ್ದಂಥ ಸರಕಾರದವರಿಂದ ಅವರನ್ನು ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ, ನಮ್ಮ ರಾಷ್ಟ್ರದಲ್ಲಿರತಕ್ಕಂಥ ಭದ್ರತಾವ್ಯವಸ್ಥೆ ಉಳಿಸುವುದಕ್ಕೆ ಸಾಧ್ಯವಾಗಲಿಲ್ಲ. ತಮಿಳುನಾಡಿನ ಸರಕಾರವನ್ನು

ಬದಲಾಯಿಸಿದ್ದರೂ ಅವರನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಹೀಗೆ ಒಂದೊಂದು ಸಾರಿ ನನ್ನ ಮನಸ್ಸಿಗೆ ಅನ್ನಿಸುತ್ತೆದೆ, ಉಳಿಸಿಕೊಳ್ಳುವುದಕ್ಕೆ ಆಗದಿದ್ದಾಗ ನಾವು ನಮ್ಮ ಸಂತಾಪವನ್ನು ಅಭಿವ್ಯಕ್ತ ಮಾಡುತ್ತಾ, ಸತ್ತಾದ ಮೇಲೆ ದೊಡ್ಡ ದೊಡ್ಡ ಸನ್ಮಾನಗಳನ್ನು ಮಾಡುತ್ತೇವೆ. ರಾಷ್ಟ್ರದ ಅತ್ಯಂತ ಶ್ರೇಷ್ಠವಾದಂಥ ಭಾರತರತ್ನ ಪ್ರಶಸ್ತಿಯನ್ನು ಕೊಟ್ಟು ಗೌರವಿಸುತ್ತೇವೆ. ಆದರೆ ಹೀಗೆ ಗೌರವವನ್ನು ಕೊಡುವುದರಿಂದ ಆ ವ್ಯಕ್ತಿಯನ್ನು ಪುನಃ ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಪ್ರವೃತ್ತಿ ಅಪ್ರಸ್ತುತವಾದರೂ ಒಂದು ಮಾತು ನನಗೆ ನೆನಪು ಬರುತ್ತದೆ. ಒಂದೊಂದು ಸಾರಿ ಒಂದೊಂದು ಚುನಾವಣೆಯಲ್ಲಿ ಒಂದೊಂದು ತಲೆಯನ್ನು ತೆಗೆಯುತ್ತಾ ಹೋದರೆ, ಒಂದೊಂದು ವ್ಯವಸ್ಥೆಯನ್ನು ಉಳಿಸಿಕೊಳ್ಳಬಹುದೇನೋ ಎನ್ನುವಷ್ಟು ಮಟ್ಟಿಗೆ ಇತ್ತೀಚಿನ ಒಂದು ದಶಕದ ಬೆಳವಣಿಗೆ ನಮ್ಮ ಕಣ್ಣ ಮುಂದೆ ಬಂದು ನಿಲ್ಲುತ್ತದೆ. ಶ್ರೀಮಾನ್ ರಾಜೀವಗಾಂಧಿಯವರು ಸತ್ತು ಕಾಂಗ್ರೆಸ್ ಪಕ್ಷವನ್ನು ಬದುಕಿಸಿದರು. ಅಂದರೆ ಇದು ತೀರಾ ಸತ್ಯಕ್ಕೆ ದೂರವಾದ ಮಾತು ಆಗುವುದಿಲ್ಲ. ಕೇವಲ 40ನೇ ವಯಸ್ಸಿನಲ್ಲಿ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವುಳ್ಳ ರಾಷ್ಟ್ರದ ಕಿರಿಯ ಪ್ರಧಾನಮಂತ್ರಿಯಾಗಿ ಯಾರ ನಿರೀಕ್ಷೆಗೂ ನಿಲುಕದಷ್ಟು ಅಥವಾ ಯಾರ ಊಹೆಗೂ ಸಿಲುಕದಷ್ಟು ಮಟ್ಟಿಗೆ ಕಾರ್ಯಪ್ರವೃತ್ತರಾಗಿ ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಿದರು ಮತ್ತು ರಾಷ್ಟ್ರಕ್ಕೂ ಕೀರ್ತಿಯನ್ನು ತಂದುಕೊಟ್ಟರು.

1981ನೇ ಇಸವಿಯಲ್ಲಿ ಶ್ರೀಮಾನ್ ಸಂಜಯಗಾಂಧಿಯವರು ತೀರಿಕೊಂಡಾಗ ಅದು ಒಂದು ದುರಂತ. ಆದರೆ ಸ್ವಯಂಕೃತ ಅಪರಾಧ ಎಂದು ಹೇಳಿ ಅದನ್ನು ಸಹಿಸಿಕೊಳ್ಳಬಹುದು. 1984ರಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ತಮ್ಮನ್ನು ಕಾಯ ಬೇಕಾದಂಥ ಜನರೇ ಆಹುತಿ ತೆಗೆದುಕೊಂಡಾಗ ಎಷ್ಟು ಎಚ್ಚರಿಕೆಯನ್ನು ವಹಿಸಬೇಕಾಗಿತ್ತೋ ಅಷ್ಟು ಎಚ್ಚರಿಕೆಯನ್ನು ವಹಿಸಿಲ್ಲವಾದ ಕಾರಣ ಇಂಥ ಮತ್ತೊಂದು ದುರಂತವನ್ನು ಈ ರಾಷ್ಟ್ರ ಎದುರಿಸಬೇಕಾಯಿತು. ಒಂದು ಕರುಳು ಮಿಡಿಯುವಂಥ ಸನ್ನಿವೇಶ ನಡೆದಿದೆ. ಪುನಃ ಅದನ್ನು ನೆನಪು ಮಾಡಿಕೊಳ್ಳುವುದಕ್ಕಾಗಿಯೋ ಏನೋ ನಾಳೆ ಅವರಿಗೆ ರಾಷ್ಟ್ರದ ಅತ್ಯಂತ ಪ್ರತಿಷ್ಠಿತ ಭಾರತರತ್ನ ಪ್ರಶಸ್ತಿಯನ್ನು ಕೊಡತಕ್ಕಂಥ ತೀರ್ಮಾನವನ್ನು ಮಾಡಿ ರಾಷ್ಟ್ರಪತಿಯವರು ನಾಳೆ ಅದನ್ನು ಕೊಡುವವರಿದ್ದಾರೆ. ತಮ್ಮ 47ನೇ ವಯಸ್ಸಿನಲ್ಲಿ ಅವರು ತಮ್ಮ ಪಿತ್ರಾರ್ಜಿತವಾದ ಗಳಿಕೆಗಳನ್ನೆಲ್ಲಾ ಮೈಗೂಡಿಸಿಕೊಂಡು ಈ ರಾಷ್ಟ್ರಕ್ಕೆ ಒಂದು ಮಾರ್ಗದರ್ಶನವನ್ನು ಕೊಡತಕ್ಕಂಥ ಎತ್ತರಕ್ಕೆ ಏರಿದ್ದು ಇಡೀ ವಿಶ್ವದ ಗಮನವನ್ನು ಸೆಳೆದಿತ್ತು. ಬಹುಶಃ ಎರಡು ಜನ ಪೇದೆಗಳು ಮಾಡಿದ್ದ ಸಣ್ಣ ಕೆಲಸವನ್ನು ನಾವು ತೀವ್ರವಾಗಿ ಗಮನಿಸದೇ ಇದ್ದಿದ್ದರೆ ಬಹುಶಃ ಈ ಚುನಾವಣೆ ಬರುತ್ತಿರಲಿಲ್ಲವೋ ಏನೋ ಮತ್ತು ಅವರು ಸಾಯುತ್ತಿರಲಿಲ್ಲವೋ ಏನೋ ಎಂಬ ನೆನಪುಗಳು ಬರುತ್ತದೆ. ಆದರೆ ಎಚ್ಚರಿಕೆಯ ಗಂಟೆಯಂತೂ ಆಗಾಗ ಈ ದೇಶದಲ್ಲಿ ಬಾರಿಸುತ್ತಿದೆ. ಇನ್ನು ಮುಂದಾದರೂ ಕೂಡ ಈ ಪ್ರವೃತ್ತಿಯನ್ನು ನಿಲ್ಲಿಸುವ ಬಗ್ಗೆ ಎಲ್ಲಾ ರಾಜಕೀಯ ಪಕ್ಷಗಳು ಪ್ರಯತ್ನ ಮಾಡಬೇಕಾಗಿದೆ. ಸಾಮಾನ್ಯವಾಗಿ ವಿಭಿನ್ನ ಭಾವನೆಗಳಿರಬಹುದು, ಆಲೋಚನೆಗಳಿರಬಹುದು. ವೈಚಾರಿಕ ಭಿನ್ನತೆ ಇರಬಹುದು ಆದರೆ ಇಂತಹ ವಿಚಾರದಲ್ಲಿ ಏಕೀಕೃತವಾಗಿ ನಿಂತು ಒಕ್ಕೊರಲಿನಿಂದ ಈ ಹಿಂಸೆಯನ್ನು ಮತ್ತು ಈ ಹಿಂಸೆಯಿಂದ ಆಗತಕ್ಕಂಥ ದುರಂತಗಳನ್ನು ತಪ್ಪಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಕ್ಕೆ ರಾಷ್ಟ್ರ ಮತ್ತು ರಾಷ್ಟ್ರದ ನಾಯಕರು ಮುಂದಾಗುತ್ತಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೂ ರಾಜೀವ್ ಅವರ ಮನೆತನಕ್ಕೂ ಸುಮಾರು 20ವರ್ಷಗಳಷ್ಟು ಕಾಲದ ಸಂಬಂಧ. ಈ ಸಂಬಂಧ ಬರೀ ರಾಜಕಾರಣಕ್ಕಾಗಿ ಪ್ರಾರಂಭವಾದರೂ ಬರಬರುತ್ತಾ ನಿಕಟವಾಗಿ ಒಂದು ರೀತಿಯ ಮಾನವೀಯ ಮೌಲ್ಯಗಳನ್ನು ಒಳಗೊಂಡ ಸಂಬಂಧ ತೀರಾ ನಿಕಟವಾಗಿತ್ತು. ನಾನು ಇತ್ತೀಚೆಗೆ ಕೂಡ ಹಲವಾರು ಬಾರಿ ರಾಜೀವ್ ಗಾಂಧಿಯವರನ್ನು ವೈಯಕ್ತಿಕವಾಗಿ ಕಂಡು

ಮಾತನಾಡಿದ್ದು ಉಂಟು. ನಾನು ಬಹಳ ಮೆಚ್ಚಿದ್ದು ಅವರಲ್ಲಿದ್ದ ಅತ್ಯಂತ ಮಾನವೀಯ ಗುಣಗಳನ್ನು. ಇದಕ್ಕೆ ಮತ್ತೊಂದು ನಿದರ್ಶನ ಕೊಡಬೇಕಾಗಿಲ್ಲ ಅದನ್ನು ನಮ್ಮ ರಾಷ್ಟ್ರದ ಹಿರಿಯ ಮುಖಂಡರಾದ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರೇ ನಿರೂಪಣೆ ಮಾಡಿದ್ದಾರೆ. ಅದಕ್ಕಿಂತ ಹೆಚ್ಚಿಗೆ ನಾನು ಹೇಳುವುದು ಅಪ್ರಸ್ತುತವೆಂದು ಭಾವಿಸುತ್ತೇನೆ. ರಾಜೀವರು ಅಟಲ್‌ಬಿಹಾರಿ ವಾಜಪೇಯಿಯವರಿಗಿದ್ದ ತೊಂದರೆಯನ್ನು ಪರಿಹರಿಸುವುದಕ್ಕಾಗಿ ಮಾಡಿದ ಪ್ರಯತ್ನಗಳ ಬಗ್ಗೆ ವಾಜಪೇಯಿಯವರು ತಮ್ಮ ಶ್ರದ್ಧಾಂಜಲಿಯಲ್ಲಿ ಬಹಳ ವಿಸ್ತಾರವಾಗಿ ಪ್ರಸ್ತಾಪಿಸಿದ್ದಾರೆ. ಒಟ್ಟು, ನಾವು ಈ ದೇಶದ ಒಬ್ಬ ಮಹಾನ್ ಮುಖಂಡನನ್ನು ಕಳೆದುಕೊಂಡಿದ್ದೇವೆ. ಅದನ್ನು ರಾಷ್ಟ್ರೀಯ ಶೋಕವನ್ನಾಗಿ ಆಚರಿಸಿದ್ದೇವೆ. ಭವಿಷ್ಯದಿಂದ ಪಾಠ ಕಲಿಯುತ್ತೇವೆಯೋ ಎಂಬುದನ್ನು ಇತಿಹಾಸವೇ ನಿರ್ಣಯ ಮಾಡಬೇಕು. ನಾನು ನನ್ನ ವತಿಯಿಂದ ನನ್ನ ಪಕ್ಷದ ವತಿಯಿಂದ ಮತ್ತು ಈ ಶಾಸನಸಭೆಯ ವತಿಯಿಂದ ಅವರ ಆತ್ಮಕ್ಕೆ ದಯಾಮಯನು ಚಿರಶಾಂತಿಯನ್ನು ಕರುಣಿಸಲಿ, ಅವರ ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಕುಟುಂಬ ಎಂದರೆ ನಾನು ಸೀಮಿತವಾಗಿ ಶ್ರೀಮತಿ ಸೋನಿಯಾಗಾಂಧಿ ಮತ್ತು ಅವರ ಮಕ್ಕಳನ್ನು ಉದ್ದೇಶಿಸಿ ಹೇಳುತ್ತಿಲ್ಲ ಪಂಡಿತ್ ಜವಹರಲಾಲ್ ನೆಹರೂ ಕುಟುಂಬವೆಂದರೆ ಬಹಳ ದೊಡ್ಡದು. ಅದರ ಉತ್ತರಾಧಿಕಾರಿಯಾದ ಶ್ರೀಮಾನ್ ರಾಜೀವ್ ಗಾಂಧಿಯವರು ಇಂತಹುದೇ ಒಂದು ದೊಡ್ಡ ಕುಟುಂಬವನ್ನು ಬಿಟ್ಟುಹೋಗಿದ್ದಾರೆ. ಆ ಕುಟುಂಬಕ್ಕೆ ಈ ದುಃಖ ಭರಿಸುವ ಶಕ್ತಿ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಡಾ:ಉಮಾಶಂಕರ ದೀಕ್ಷಿತರಿಗೂ ನನಗೂ ಇದ್ದುದು ತಂದೆ ಮಕ್ಕಳ ವೈಯಕ್ತಿಕ ಸಂಬಂಧ. 1968ರಲ್ಲಿ ಕಾಂಗ್ರೆಸ್ ವಿಭಜನೆಯಾದಾಗ ಎರಡನೇ ಬಾರಿಗೆ ನಾನು ಲೋಕಸಭೆಯ ಅಭ್ಯರ್ಥಿಯಾದದ್ದು ಬಹುಶಃಶ್ರೀಮಾನ್ ದೀಕ್ಷಿತರ ಆಶೀರ್ವಾದದಿಂದ. ಅದಕ್ಕಾಗಿ ಅವರ ಸ್ಮರಣೆ ಮಾಡಿಕೊಳ್ಳುವುದೂ ನನ್ನ ಕರ್ತವ್ಯ. ಇತ್ತೀಚೆಗೆ ಅವರನ್ನು ನಾನು ನನ್ನ ಮಗಳ ಮದುವೆಗೆ ಕರೆಯಲಿಕ್ಕೆಂದು ಹೋದಾಗ ಎರಡು ಗಂಟೆಗಳ ಕಾಲ ಕೂರಿಸಿಕೊಂಡಿದ್ದರು. ನನಗೆ 6 ಪುಟಗಳ ಪತ್ರ ಬರೆದಿದ್ದಾರೆ. ಅವರು ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿದ್ದಾಗ ಕೂಡ ಅವರ ಆಹ್ವಾನದ ಮೇಲೆ ನಾವು ಹೋಗಿ ಅಲ್ಲಿ ಇದ್ದುದು ಎಂತಹ ರಾಜಕೀಯ ಬದಲಾವಣೆಗಳಾದರೂ ಅವರು ಈ ಸಂಬಂಧದಲ್ಲಿ ಸ್ವಲ್ಪವೂ ವ್ಯತ್ಯಾಸವನ್ನು ಮಾಡದೆ ಕೌಟುಂಬಿಕವಾದ ಭಾವನೆಯಿಂದಲೇ ಕಂಡಿದ್ದರು. ಅವರು ರಾಷ್ಟ್ರೀಯ ಒಂದು ಆಸ್ತಿ. ಈ ರಾಷ್ಟ್ರಕ್ಕೆ ಅವರ ಅನುಭವಗಳು ತೀರಾ ಅಗತ್ಯವಾಗಿದ್ದ ಕಾಲದಲ್ಲಿ ನಾವು ಅವರನ್ನು ಕಳೆದುಕೊಂಡಿದ್ದೇವೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ. ಮತ್ತೊಬ್ಬ ರಾಷ್ಟ್ರದ ಹಿರಿಯ ಮುಖಂಡರಾದಂಥ ಶ್ರೀಮಾನ್ ಶ್ರೀಪಾದ ಅಮೃತ ಡಾಂಗೆಯವರು ಇತ್ತೀಚೆಗೆ ನಿಧನ ಹೊಂದಿದ್ದಾರೆ. ಅವರು ಈ ರಾಷ್ಟ್ರದಲ್ಲಿ ಕಮ್ಯುನಿಸ್ಟ್ ಚಳುವಳಿಯನ್ನು ಹುಟ್ಟು ಹಾಕಿದ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು. 1946ರ ಸುಮಾರಿಗೆ ಬಾಂಬೆಯಲ್ಲಿ ವಿಧಾನಸಭೆಯ ಸದಸ್ಯರಾಗಿ 1957 ಮತ್ತು 1967 ರಲ್ಲಿ ಸಂಸತ್ತಿನ ಸದಸ್ಯರಾಗಿ 1962ರಲ್ಲಿ ಸಿ.ಪಿ.ಐ.ನ ಚುನಾಯಿತ ಅಧ್ಯಕ್ಷರಾಗಿ ಮತ್ತು ಈ ರಾಷ್ಟ್ರದ ಬಹುತೇಕ ಕಾರ್ಮಿಕರ ಚಳುವಳಿಯ ರೂವಾರಿಯಾಗಿ ಕೆಲಸ ಮಾಡಿದ್ದಾರೆ. ಅವರು ಮಹಾನ್ ರಾಷ್ಟ್ರಭಕ್ತರು. ಸ್ವಾತಂತ್ರ್ಯ ಚಳುವಳಿಯಲ್ಲೂ ಕೂಡಾ ದುಡಿದವರು, ಉತ್ತಮ ಬರಹಗಾರರು. ಒಳ್ಳೊಳ್ಳೆಯ ಪುಸ್ತಕಗಳನ್ನು ಕೂಡಾ ಬರೆದಿದ್ದಾರೆ. ನೆನಪಿಸಿಕೊಳ್ಳಬಹುದಾದಂಥ ಒಂದೆರಡನ್ನು ನಾನು ಇಲ್ಲಿ ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. "Gandhi Vs lenin" to the slavery" ಮತ್ತು "from the primitive communism" ಹೀಗೆ ರಾಷ್ಟೀಯ ಪುರಸ್ಕಾರ ದೊರೆತಂಥ ಅನೇಕ ಪುಸ್ತಕಗಳನ್ನು ರಚಿಸಿದ್ದಾರೆ. ಅವರೂ ಕೂಡಾ ಒಬ್ಬ ರಾಷ್ಟ್ರದ ಮಹಾನ್ ವ್ಯಕ್ತಿ. ಅವರಿಗೂ ನನ್ನ ಮತ್ತು ನಮ್ಮ ಪಕ್ಷದ ವತಿಯಿಂದ ಶ್ರದ್ಧಾಂಜಲಿಯನ್ನು ಸಮರ್ಪಣೆ ಮಾಡುತ್ತೇನೆ.

ಶ್ರೀಮಾನ್ ಡಿ.ಪಿ. ಕರ್‌ಮರ್‌ಕರ್‌ರವರು ಗಾಂಧಿ ಯುಗದ ಸ್ವಲ್ಪಮಟ್ಟಿಗೆ ಕೊನೆಯ ಕೊಂಡಿ ಎಂದು ಕಾಣುತ್ತದೆ. ಶ್ರೀಮಾನ್ ಕರ್ಡೀಕರ್‌ರವರು, ಶ್ರೀಮಾನ್ ದಿವಾಕರ್‌ರವರು, ಕರ್‌ಮರ್‌ಕರ್‌ರವರು, ಇದೊಂದು ಸ್ವಾತಂತ್ರ್ಯ ಹೋರಾಟದ ಬದುಕಿದ್ದ ಪೀಳಿಗೆಯ ಕೊನೆಯ ಕೊಂಡಿ ಕಳಚಿಕೊಂಡಿದೆ. ಆದರೆ ಅವರ ಆದರ್ಶಗಳು ಇನ್ನೂ ನಮ್ಮ ನಾಡಿನಲ್ಲಿ ಉಳಿಯುತ್ತವೆ, ಅವುಗಳನ್ನು ಉಳಿಸಿಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡುತ್ತೇವೆ, ಎಂದು ವಿಶ್ವಾಸಪಟ್ಟರೆ ಅವರ ಆತ್ಮಕ್ಕೆ ನಿಜವಾದ ಶಾಂತಿಯನ್ನು ಮತ್ತು ಶ್ರದ್ಧಾಂಜಲಿಯನ್ನು ಸಲ್ಲಿಸಿದಂತಾಗುತ್ತದೆ ಎಂದು ಭಾವನೆ ಮಾಡುತ್ತೇನೆ.

ಶ್ರೀಮಾನ್ ಹೆಚ್.ಜಿ. ಚನ್ನಪ್ಪನವರು ಬಹಳ ಸೌಮ್ಯ, ಸರಳ, ನಿಗರ್ವಿ ವ್ಯಕ್ತಿ ಮಂತ್ರಿಯಾದರೂ ಅಷ್ಟೆ, ಶಾಸನಸಭೆಯ ಸದಸ್ಯರಾದರೂ ಅಷ್ಟೇ ಸದಸ್ಯತ್ವ ಇಲ್ಲದಿದ್ದರೂ ಅಷ್ಟೆ, ತೀರಾ ಸರಳವಾಗಿ ಬದುಕಿದವರು. ನಮ್ಮ ಪಕ್ಷಕ್ಕಂತೂ ಒಂದು ದೊಡ್ಡ ನೋವಾಗಿದೆ ಮತ್ತು ಒಬ್ಬ ಮುಖಂಡನನ್ನು ನಾವು ಕಳೆದುಕೊಂಡಿದ್ದೇವೆ. ಅವರು ಸತ್ತಾಗ ನಾನು ಅವರನ್ನು ಸಂದರ್ಶಿಸಬೇಕು ಎಂದು ಹೋದರೆ ತಮ್ಮ ಕಣ್ಣುಗಳನ್ನು ಕೂಡಾ ದಾನ ಮಾಡಿದ್ದರು. ಅದಕ್ಕಾಗಿ ಅವರ ಕಣ್ಣುಗಳನ್ನು ತೆಗೆಯುವುದಕ್ಕೆ ದೇಹವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದಾರೆ ಎಂದು ಅಲ್ಲಿ ಹೇಳಿದರು. ಅವರು ಸಾವಿನೊಂದಿಗೂ ಕೂಡಾ ಏನಾದರೂ ಇಷ್ಟು ಸೇವೆ ಮಾಡಬೇಕು ಎನ್ನುವ ಒಂದು ಸದ್ಭಾವನೆಯನ್ನು ಇಟ್ಟುಕೊಂಡಂಥ ಶ್ರೀಮಾನ್ ಚನ್ನಪ್ಪನವರು ತಮ್ಮ ಕಣ್ಣುಗಳನ್ನು ದಾನ ಮಾಡಿದ್ದರು. ಅವರು ಒಬ್ಬ ಮಗ, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿ ಹೋಗಿದ್ದಾರೆ. ಅವರಿಗೆ ಭಗವಂತನು ಶಾಂತಿಯನ್ನು ಕರುಣಿಸಲಿ ಎಂದು ಹೇಳಿ ಈ ಮೂಲಕ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಹಾಗೆಯೇ ಬಸವನಗೌಡ ಪಾಟೀಲರು ಎನ್.ಸಿ. ಎಡ್ಕೆರವರು ಮತ್ತು ಶ್ರೀಮತಿ ರುಕ್ಮಿಣಿಯವರುಗಳನ್ನು ನಾವು ಕಳೆದುಕೊಂಡಿದ್ದೇವೆ. ನಮ್ಮ ಹಿಂದಿನ ಶಾಸನಸಭೆಗೂ, ಇಂದಿನ ಶಾಸನಸಭೆಗೂ ಬಹಳ ಅಂತರವೇನೂ ಇಲ್ಲ, ಸರಿಸುಮಾರು ನೂರು ದಿವಸಗಳನ್ನು ಕಳೆದಿರಬಹುದು. ಇಷ್ಟರಲ್ಲಿಯೇ ನಾವುಗಳು ಇಂತಹ ದೊಡ್ಡ ಮಹಾನ್ ವ್ಯಕ್ತಿಗಳನ್ನು ಕಳೆದುಕೊಂಡಿದ್ದೇವೆ. ಅವರೆಲ್ಲರಿಗೂ ನನ್ನ ವತಿಯಿಂದ, ನನ್ನ ಪಕ್ಷದ ವತಿಯಿಂದ, ಶಾಸನಸಭೆಯ ವತಿಯಿಂದ, ಹೃತ್‌ಸ್ಪರ್ಶಿಯಾದ ನಮನಗಳನ್ನು ಸಮರ್ಪಣೆ ಮಾಡಿ ದಯಾಮಯನು ಈ ಎಲ್ಲಾ ಆತ್ಮಗಳಿಗೂ ಚಿರಶಾಂತಿಯನ್ನು ಕರುಣಿಸಲಿ ಎಂದು ಹೇಳುತ್ತೇನೆ. ಅವರು ಬಿಟ್ಟು ಹೋಗಿರ ತಕ್ಕಂಥ ಮೌಲ್ಯಗಳು ನಮ್ಮಗಳಿಗೆ ಮಾರ್ಗದರ್ಶನವಾಗಲಿ ಎಂದು ಹಾರೈಸಿ ತಾವು ಅಭಿವ್ಯಕ್ತ ಮಾಡಿದಂಥ ಭಾವನೆಗಳಿಗೆ ಈ ಮೂಲಕ ಧ್ವನಿಗೂಡಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಅಧ್ಯಕ್ಷರೆ, ಮೇ 21ರಂದು ಶ್ರೀ ರಾಜೀವ್ ಗಾಂಧಿಯವರ ಭೀಕರ ಕಗ್ಗೊಲೆ ಏನು ನಡೆಯಿತು ಅದು ತಾವೇ ತಿಳಿಸಿದಂತೆ, ಇಡೀ ದೇಶವನ್ನೇ ಅಲ್ಲ, ಇಡೀ ಪ್ರಪಂಚವನ್ನೇ ತಲ್ಲಣಗೊಳಿಸಿದಂತಹ ಒಂದು ದುರ್ಘಟನೆ ಆಯಿತು. ಬಹುಶಃ ದೇಶದ ಇತಿಹಾಸದಲ್ಲಿ ಮೇ 21,1991 ಒಂದು ಕರಾಳ ದಿನವೆಂದು ಮುಂದಿನ ಪೀಳಿಗೆ ಜ್ಞಾಪಿಸಿಕೊಳ್ಳುವಂತಹ ದುರ್ಘಟನೆ ಅಂದು ನಡೆದುಹೋಯಿತು. ಈ ಮಹಾ ನಾಯಕನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಸಂದರ್ಭದಲ್ಲಿ ತಾವು ಸಂತಾಪ ಸೂಚನೆ ನಿರ್ಣಯವನ್ನು ಮಂಡನೆ ಮಾಡಬೇಕಾದರೆ ರಾಷ್ಟ್ರದ ಮಹಾನಾಯಕನಿಗೆ ಸಲ್ಲಬೇಕಾದ ಗೌರವ, ಶಬ್ದಗಳನ್ನು ಸೇರಿಸಿದ್ದೀರಿ. ಅದಕ್ಕೆ ನನ್ನ ಸಂಪೂರ್ಣ ಸಮ್ಮತ ಇದೆ. ಬಹುಶಃ ನಮ್ಮ ದೇಶದ ಇತಿಹಾಸದಲ್ಲಿ ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿ ಅವತ್ತಿನ ಒಂದು ಕಲುಷಿತ ರಾಜಕೀಯ ಪರಿಸ್ಥಿತಿಯಲ್ಲಿ ದೇಶದ ಪ್ರಧಾನಿಯಾಗಿ ಜವಾಬ್ದಾರಿಯನ್ನು ತೆಗೆದುಕೊಂಡು ಅವರು ನಿರ್ವಹಿಸಿದಂತಹ ಪಾತ್ರ ಬಹುಶಃ ನಾವೆಲ್ಲರೂ ನೆನಪುಮಾಡಿಕೊಳ್ಳುವಂತಹದ್ದು ತುಂಬಾ

ಅನುಕರಣೀಯವಾದಂತಹುದೆಂದು ನಾನು ಭಾವಿಸಿದ್ದೇನೆ. ಮೇ 24, 1991ರಂದು ದೆಹಲಿಯಲ್ಲಿ ಅಖಿಲ ಭಾರತ ಅಧಿವೇಶನದ ಸಭೆ ಸೇರಿದಾಗ ಅಗಲಿದ ಮಹಾ ನಾಯಕನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವಂತಹ ಸಂದರ್ಭದಲ್ಲಿ ಸನ್ಮಾನ್ಯ ಚಂದ್ರೇಗೌಡರು ಹೇಳಿದಂತೆ ಅಟಲ್ ಬಿಹಾರಿ ವಾಜಪೇಯಿಯವರು 4-5 ನಿಮಿಷ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಆ ಮಟ್ಟದಲ್ಲಿ ಹಿರಿಯ ನಾಯಕರ ಪರಸ್ಪರ ಸಂಬಂಧ ಹೇಗಿರುತ್ತದೆಂದು ವರ್ಣನೆ ಮಾಡುತ್ತಾ ಅವರು ಹೇಳಿದರು. ವಿರೋಧಪಕ್ಷದ ನಾಯಕರ ಬಗ್ಗೆ ಇದ್ದಂತಹ ಅಭಿಮಾನ, ಅನೇಕ ರಾಜಕೀಯ ಪಕ್ಷಗಳ ಬಗ್ಗೆ ಭಿನ್ನಾಭಿಪ್ರಾಯಗಳು ಇದ್ದು ಹೋರಾಟ ಮಾಡುವಂತಹ ಸಂದರ್ಭ ಬಂದಾಗಲೂ ಸಹ, ಅವರ ವೈಯುಕ್ತಿಕ ಆರೋಗ್ಯದ ಬಗ್ಗೆ ಅವರು ಚಿಂತನೆ ಮಾಡುತ್ತಿರಲಿಲ್ಲ, ಅವರ ಆರೋಗ್ಯ ಸರಿಯಿಲ್ಲವೆಂದು ಗೊತ್ತಾದಾಗ ಲೋಕಸಭಾ ಸದಸ್ಯರ ಸಮಿತಿಯಲ್ಲಿ ಅವರ ಹೆಸರನ್ನು ಸೇರಿಸಿ ವಿದೇಶಕ್ಕೆ ಹೋಗಿ ಅವರಿಗೆ ಏನು ಒಂದು ಸಣ್ಣ ಆಪರೇಶನ್ ಆಗಬೇಕಾಗಿತ್ತು. ಅದನ್ನು ಮಾಡಿಕೊಳ್ಳಲೇಬೇಕೆಂದು ಆಗ್ರಹ ಮಾಡಿ ಕಳುಹಿಸಿಕೊಟ್ಟಿದ್ದನ್ನು ಅವರು ನೆನಪು ಮಾಡಿಕೊಂಡರು. ಬಹುಶಃ ಪ್ರಧಾನಿ ಸ್ಥಾನ ಹೋಗುವಂತಹ ಸ್ವಲ್ಪ ದಿವಸದ ಮುಂಚೆ ದೆಹಲಿಯಲ್ಲಿ ಲಾಲ್‌ಕೃಷ್ಣ ಅಡ್ವಾಣಿಯವರ ಮಗಳ ಮದುವೆಯ ಸಂದರ್ಭದಲ್ಲಿ ಬಿಗಿ ಭದ್ರತಾ ವ್ಯವಸ್ಥೆ ಇದ್ದು ಎಲ್ಲರ ಮಧ್ಯೆ ಅವರು ಬರುವುದಕ್ಕೆ ಆಗದೆ ಪಕ್ಕದಲ್ಲಿ ಬೇರೆ ವ್ಯವಸ್ಥೆ ಮಾಡಿತ್ತು. 10-15-20 ನಿಮಿಷ ಒಟ್ಟಿಗೆ ಇದ್ದಾಗ ಅವರು ನಡೆದುಕೊಂಡಂತಹ ಸರಳತನ ನಮ್ಮೆಲ್ಲ ನಾಯಕರ ಜೊತೆ ಅವರು ಮಾತನಾಡಿದ ರೀತಿ ಈ ಶೈಲಿಯನ್ನು ನೋಡಿದಾಗ ಬಹುಶಃ ಅಷ್ಟೊಂದು ಚಿಕ್ಕ ವಯಸ್ಸಿನಲ್ಲಿ ಈ ರೀತಿ ಇಡೀ ರಾಷ್ಟ್ರದ ನಾಯಕರ ಜೊತೆಯಲ್ಲಿ ಹೊಂದಿದ್ದಂತಹ ಒಳ್ಳೆಯ ಸಂಬಂಧ, ಅವರು ನಡೆದುಕೊಂಡ ರೀತಿ ನಿಜವಾಗಿಯೂ ನನ್ನನ್ನು ಆಶ್ಚರ್ಯಚಕಿತಗೊಳಿಸಿತು.

ರಾಜಕಾರಣದಲ್ಲಿ ಕೆಲಸ ಮಾಡಿದಂತಹ ಅನೇಕ ಜನ ಈ ರೀತಿ ಅಷ್ಟೊಂದು ಚಿಕ್ಕ ವಯಸ್ಸಿನಲ್ಲಿ ದೊಡ್ಡ ಜವಾಬ್ದಾರಿ ಸಿಕ್ಕಿದಾಗ ಯಾವ ರೀತಿಯಲ್ಲಿ ನಡೆದುಕೊಳ್ಳಬಹುದೆಂದು ಮಾದರಿಯಾಗಿ ಅವರ ಜೀವನದಲ್ಲಿ ಮಾಡಿ ತೋರಿಸಿದ್ದಾರೆಂದು ನಾನು ಭಾವಿಸಿದ್ದೇನೆ. ಬಹುಶಃ ಇಡೀ ದೇಶದಲ್ಲಿ ಅನೇಕ ರಾಜಕೀಯ ಪಕ್ಷದ ನಾಯಕರ ಕಗ್ಗೊಲೆಯಾಗಿರುವುದು ಸರ್ವೇ ಸಾಮಾನ್ಯವಾದಂತಹ ಪರಿಸ್ಥಿತಿ. ಸನ್ಮಾನ್ಯ ಮುಖ್ಯಮಂತ್ರಿಗಳು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಪ್ರಯತ್ನ ಮಾಡಿದರು. ಹಿಂದೆ ಜನಸಂಘ ಬೆಳೆಯುತ್ತಿದ್ದಂತಹ ಕಾಲದಲ್ಲಿ ಹಿರಿಯ ನಾಯಕರಾದ ಅಂದಿನ ಅಧ್ಯಕ್ಷರಾದಂತಹ ಶ್ಯಾಮಪ್ರಸಾದ್ ಮುಖರ್ಜಿಯವರನ್ನು ಕಳೆದುಕೊಂಡಂತಹ ಜನ ನಾವು. ಪಂಡಿತ್ ದೀನದಯಾಳ್ ಉಪಾಧ್ಯಾಯರು ಅವತ್ತಿನ ಅಧ್ಯಕ್ಷರಾಗಿದ್ದರು. ಅವರು ದೈವಾಧೀನರಾದರು ಕಗ್ಗೊಲೆಯಾಯಿತು. ಬಹುಶಃ ಆ ನಿಗೂಢ ಸಾವು ಇವತ್ತು ಪತ್ತೆಯಾಯಿತು. ಅದರೆ ಇವತ್ತು ಸರ್ಕಾರ ವಿಶೇಷವಾದಂತಹ ಪ್ರಯತ್ನ ಮಾಡಿ ಈ ರೀತಿ ರಾಷ್ಟ್ರೀಯ ನಾಯಕರ ಕಗ್ಗೊಲೆಯಾದ ಸಂದರ್ಭದಲ್ಲಿ ಯಾರ ಕೈವಾಡ ಇದೆ ಅದನ್ನು ಬೇರು ಸಹಿತ ಕಿತ್ತುಹಾಕುವಂತಹ ಪ್ರಯತ್ನ ಏನು ನಡೆಯುತ್ತಿದೆ ಇದು ನಿಜಕ್ಕೂ ಸಹ ಮುಂದುವರೆಯಬೇಕಾಗಿರುವಂಥದ್ದು. ಆ ಬಗ್ಗೆ ಎಲ್ಲಾ ತರಹ ಪ್ರಯತ್ನವನ್ನು ನಾವೆಲ್ಲರೂ ಸೇರಿ ಮಾಡಬೇಕಾಗಿದೆ. ಇದೇ ಸಂದರ್ಭದಲ್ಲಿ ಈ ರೀತಿ ಅಗಲಿದ ನಾಯಕನಿಗೆ ನನ್ನ ಪಕ್ಷದ ಪರವಾಗಿ ಹಾಗೂ ನನ್ನ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಅದೇ ರೀತಿ ಹಿರಿಯರಾದಂತಹ ಉಮಾಶಂಕರ್ ದೀಕ್ಷಿತ್‌ರವರು ಎಸ್.ಸಿ. ಎಡ್ಮೆಯವರು ಹತ್ತಿರದಿಂದ ನೋಡುವುದಕ್ಕೆ ಅವಕಾಶ ಸಿಕ್ಕಿದ ಮಾಜಿ ಮಂತ್ರಿಯಾದಂತಹ ಚೆನ್ನಪ್ಪನವರು, ಶ್ರೀಮತಿ ರುಕ್ಮಿಣಿಯವರು, ಕಮ್ಯುನಿಸ್ಟ್ ಪಕ್ಷದ ಮಹಾ ನಾಯಕರಾದಂತಹ ಡಾಂಗೆಯವರು ಈ ರೀತಿ ಅನೇಕ ಜನ ಅಗಲಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ಈ ದುಃಖವನ್ನು ತಡೆದುಕೊಳ್ಳುವಂತಹ ಶಕ್ತಿ ಅವರ ಕುಟುಂಬದವರಿಗೆ ಬರಲೆಂದು ಭಗವಂತನಲ್ಲಿ

ಪ್ರಾರ್ಥನೆ ಮಾಡಿ, ತಾವು ಸಂತಾಪ ಸೂಚಕ ನಿರ್ಣಯದಲ್ಲಿ ಒಂದು ಮಾತನ್ನು ಏನು ಹೇಳಿದ್ದೀರಿ ಅದಕ್ಕೆ ನನ್ನ ಸಂಪೂರ್ಣ ಸಹಕಾರವನ್ನು ಪೂರ್ಣ ಸಮ್ಮತಿಯನ್ನು ಸೂಚಿಸುತ್ತಾ, ಮತ್ತೊಮ್ಮೆ ಅವರೆಲ್ಲರಿಗೂ ಶ್ರದ್ಧಾಂಜಲಿಯನ್ನು ಅರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಅಧ್ಯಕ್ಷರೆ, ಈ ಸಭೆಯಲ್ಲಿ ಅತ್ಯಂತ ದುಃಖಕರವಾದಂತಹ ಒಂದು ಪ್ರಸಂಗವನ್ನು ಈ ದಿವಸ ನಾವು ಎದುರಿಸುತ್ತಿದ್ದೇವೆ. ಈ ಪ್ರಸಂಗ ಇಲ್ಲಿ ಬರಬಾರದಾಗಿತ್ತು. ಆದರೂ ದೇಶದ ದುರಾದೃಷ್ಟ, ಆ ಪ್ರಸಂಗ ಇಲ್ಲಿ ಬಂದೊದಗಿದೆ. ಈ ದೇಶದ ರಾಜಕಾರಣದಲ್ಲಿ ಅತ್ಯಂತ ಕಿರಿಯ ವಯಸ್ಸಿನಲ್ಲಿ ಪ್ರಧಾನ ಮಂತ್ರಿಗಳಾಗಿ ಈ ದೇಶದ ದಿಕ್ಕನ್ನು ಬದಲಾಯಿಸತಕ್ಕಂಥಹ ಒಂದು ತೀವ್ರವಾದಂತಹ ಪ್ರಯತ್ನವನ್ನು ನಡೆಸಿದ್ದೂ ಅಲ್ಲದೆ ವಿಶ್ವ ಮಟ್ಟದಲ್ಲೂ ಸಹ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿ ಶ್ರೀ ರಾಜೀವ್ ಗಾಂಧಿಯವರು ಮೆರೆದಿದ್ದವರು. ಮಾನ್ಯ ಮುಖ್ಯಮಂತ್ರಿಗಳು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ದೇಶದಲ್ಲಿ ಹಿಂಸೆ ಎನ್ನತಕ್ಕಂಥಾದ್ದು ಎಲ್ಲಿ, ಎಷ್ಟರಮಟ್ಟಿಗೆ ಹೋಗುತ್ತಾ ಇದೆ ಎಂಬ ಬಗ್ಗೆ ಅವರು ತಮ್ಮ ಕಳವಳವನ್ನು ಸೂಚಿಸಿದ್ದಾರೆ. ಅದು ಅಷ್ಟೇ ಅಲ್ಲ, ಇಡೀ ದೇಶ ಈ ಬಗ್ಗೆ ತೀವ್ರವಾದ ಆಲೋಚನೆ ಮಾಡಬೇಕಾಗಿರತಕ್ಕದ್ದು ಅವಶ್ಯಕ. ಅಷ್ಟೇ ಅಲ್ಲದೆ, ಹಿಂಸೆಯನ್ನು ನಿಲ್ಲಿಸತಕ್ಕಂಥ ಒಂದು ಪ್ರಯತ್ನ, ವೈಯಕ್ತಿಕವಾಗಿ ಮತ್ತು ರಾಜಕೀಯ ಪಕ್ಷಗಳಿಂದ ಎಲ್ಲರಿಂದ ಆಗಬೇಕಾಗಿರತಕ್ಕದ್ದು ಈ ದಿವಸದ ಅವಶ್ಯಕತೆ. ಅದರ ಬಗ್ಗೆ ನಾವೆಲ್ಲರೂ ಕೂಡ ಚಿಂತನೆ ಮಾಡಬೇಕಾಗಿರತಕ್ಕದ್ದು ಬಹಳ ಅವಶ್ಯಕತೆ ಇವತ್ತಿನ ದಿವಸ ಇದೆ. ಅಷ್ಟೇ ಅಲ್ಲದೆ, ಮಾನ್ಯ ರಾಜೀವ್ ಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ ನಾನು ಮಂತ್ರಿಯಾಗಿ ಕೆಲಸ ಮಾಡತಕ್ಕ ಅವಕಾಶ ಒದಗಿ ಬಂದಿತ್ತು. 19855-86ನೇ ಇಸವಿಯಲ್ಲಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯನ್ನು ನೋಡುವುದಕ್ಕೆ ಅವರೂ ಸಹ ಬಂದಿದ್ದರು. ಬಾಗೇಪಲ್ಲಿ ತಾಲ್ಲೂಕಿನಲ್ಲಿ ನಾವು ಬರಗಾಲದ ಕಾರ್ಯಕ್ರಮವನ್ನು ನಡೆಸುತ್ತಿದ್ದೆವು. ಅದನ್ನು ವೀಕ್ಷಿಸುವುದಕ್ಕೆ ಅವರೂ ಸಹ ಬಂದಿದ್ದರು. ಸುಮಾರು ಅರ್ಧ ಅಥವಾ ಮುಕ್ಕಾಲು ಗಂಟೆ ಕಾಲ ಅವರೊಂದಿಗೆ ಇರತಕ್ಕ ಅವಕಾಶ ನನಗೆ ಒದಗಿ ಬಂದಿತ್ತು. ಅವರು ಬಂದ ತಕ್ಷಣ ನಾವು ಎಲ್ಲಾ ಏರ್ಪಾಡುಗಳನ್ನು ಮಾಡಿದ್ದೆವು. ಅವರು ಯಾವ ಕಡೆ ಹೋಗಬೇಕು ಯಾವ ಕಡೆ ಬರಬೇಕು ಎಂಬ ಏರ್ಪಾಡು ಮಾಡಿದ್ದರೂ ಕೂಡ ಅದೊಂದನ್ನೂ ಲೆಕ್ಕಿಸದೆ ಅವರ ಮನಸ್ಸಿಗೆ ಬಂದ ರೀತಿಯಲ್ಲಿ ಅಂದರೆ ಜನ ಎಲ್ಲಿ ಕೆಲಸ ಮಾಡುತ್ತಿದ್ದಾರೆ, ಸಂಕಷ್ಟಕ್ಕೆ ಒಳಗಾಗಿರತಕ್ಕ ಜನ ಎಲ್ಲಿ ಇದ್ದಾರೆ ಅಲ್ಲಿಗೆ ನೇರವಾಗಿ ಹೋಗಿ ಅವರ ಮಧ್ಯೆ ಬೆರೆತು ಅವರನ್ನು ಮಾತನಾಡಿಸತಕ್ಕ ಒಂದು ಮಹಾನ್ ಕಾರ್ಯವನ್ನು ಅವರು ಮಾಡಿದರು. ಅವತ್ತಿನ ದಿವಸ ನನಗಂತೂ ಹೆದರಿಕೆ ಆಗಿತ್ತು. ಕಾರಣವೇನೆಂದರೆ ಅವರು ಅವತ್ತಿನ ದಿವಸ ನಿಂತುಕೊಂಡಿದ್ದುದು ಒಂದು ಕೆರೆಯ ಕಟ್ಟೆಯ ಕಲ್ಲಿನ ಮೇಲೆ. ಆ ಕಲ್ಲುಗಳ ಮೇಲೆ ಸರಿಯಾಗಿ ನಿಲ್ಲುವುದಕ್ಕೆ ಅವಕಾಶ ಇಲ್ಲದೇ ಇರುವ ಜಾಗದಲ್ಲಿ ನಿಂತು ಜನರ ಮಧ್ಯೆ ಬೆರೆತು ಅವರನ್ನು ಮಾತನಾಡಿಸಿದರು. ಈ ಒಂದು ಅವಕಾಶ ನನ್ನ ಜೀವನದಲ್ಲಿ ಒದಗಿ ಬಂದಿದ್ದು ಅದು ಒಂದು ಅದೃಷ್ಟ ಎಂದು ನಾನು ಭಾವಿಸಿದ್ದೇನೆ.

ಅಷ್ಟೇ ಅಲ್ಲದೆ, ನಾವು ಅಧಿಕಾರದಲ್ಲಿ ಇದ್ದಾಗ ಕೆಲವು ಸಂದರ್ಭದಲ್ಲಿ ದುಡುಕಿ ಮಾಡಿದಂತಹ ಕೆಲಸಗಳು ನಮಗೆ ಆತಂಕವನ್ನು ಉಂಟು ಮಾಡಬಹುದೇನೋ ಎಂಬ ಅನುಮಾನ ಅವತ್ತು ಬಾಗೇಪಲ್ಲಿಯಲ್ಲಿ ನಡೆದಂತಹ ಘಟನೆಯಿಂದ ಇವತ್ತು ಹೌದು ಎಂಬ ಭಾವನೆ ನನಗೆ ಬರುತ್ತಿದೆ. ಕಾರಣವೇನೆಂದರೆ ಅಲ್ಲಿ, ಸರಿಯಾದ, ಭದ್ರವಾದ ವ್ಯವಸ್ಥೆ ನಾವು ಮಾಡಿದ್ದರೂ ಕೂಡ ಅವರು ಆ ವ್ಯವಸ್ಥೆಯನ್ನು ಬಿಟ್ಟು ನೇರವಾಗಿ

ಜನರ ಮಧ್ಯೆ ಹೋಗತಕ್ಕ ಪ್ರಯತ್ನ ನಡೆಸಿದ್ದರು. ಬಹುಶಃ ಇಲ್ಲೂ ಕೂಡ ಅದೇ ಅವರಿಗೆ ಅಂತ್ಯವನ್ನು ತರತಕ್ಕ ಪ್ರಸಂಗ ಒದಗಿ ಬಂದಿದ್ದು ಬಹಳ ದುರಾದೃಷ್ಟ. ಈ ದೇಶದಲ್ಲಿ ಹಿಂಸೆಯನ್ನು ತೊಡೆದುಹಾಕುವುದಕ್ಕೆ ನಾವೆಲ್ಲರೂ ಛಲದಿಂದ ಕಾರ್ಯಕ್ರಮವನ್ನು ಎಸೆಗಬೇಕಾಗಿದೆ. ಇದರಲ್ಲಿ ನಾವೆಲ್ಲರೂ ಭಾಗಿಗಳಾಗೋಣ. ಮತ್ತೊಬ್ಬ ಮಹಾನ್ ವ್ಯಕ್ತಿ ಶ್ರೀಮಾನ್ ಡಾಂಗೆ ಅವರು. ಈ ಸಮಾಜದಲ್ಲಿ ಶೋಷಣೆಯನ್ನು ಮುಕ್ತಾಯ ಗೊಳಿಸುವುದಕ್ಕೋಸ್ಕರ, ಶೋಷಣೆಯನ್ನು ತೊಡೆದು ಹಾಕುವುದಕ್ಕೋಸ್ಕರ ಭಾರತ ದೇಶದಲ್ಲಿ ಬಹಳ ಪ್ರಾರಂಭದಲ್ಲಿಯೇ ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಬಂದ ನಂತರ ಬಹಳ ತೀವ್ರವಾದ ಪ್ರಯತ್ನವನ್ನು ನಡೆಸಿರತಕ್ಕವರು ಶ್ರೀಮಾನ್ ಎಸ್.ಎ. ಡಾಂಗೆ ಅವರು. ಅವರು ಭೂಗತವಾಗಿದ್ದು, ಈ ದೇಶದಲ್ಲಿ ಸಾಮ್ಯವಾದವನ್ನು ಜಾರಿಗೆ ತರುವುದಕ್ಕೋಸ್ಕರ, ಸಾಮ್ಯವಾದವನ್ನು ಸ್ಥಾಪಿಸುವುದಕ್ಕೋಸ್ಕರ ಅತ್ಯಂತ ತೀವ್ರವಾದಂತಹ ಪ್ರಯತ್ನವನ್ನು ನಡೆಸಿರತಕ್ಕವರು.

12.15 ಪಿ.ಎಂ.

ಮತ್ತು ಅದಕ್ಕೆ ಎಲ್ಲಾ ತ್ಯಾಗಗಳನ್ನೂ ಕೂಡ ಮಾಡಿ, ಇಡೀ ದೇಶದಲ್ಲಿಯೇ ಅಲ್ಲ, ಇಡೀ ಪ್ರಪಂಚದಲ್ಲಿಯೇ ಕಮ್ಯುನಿಷ್ಟ್ ಚಳುವಳಿಯಲ್ಲಿ ಅತ್ಯಂತ ಎತ್ತರಕ್ಕೆ ಬೆಳೆದು, ಅಗ್ರಗಣ್ಯ ನಾಯಕರಾಗಿದ್ದಂಥ ಶ್ರೀ ಎಸ್.ಎ. ಡಾಂಗೆಯವರು ಇವೊತ್ತು ನಮ್ಮ ಕಣ್ಮುಂದೆ ಇಲ್ಲ, ಮತ್ತು ಈ ಚಳುವಳಿಗೆ ಅವರು ಹಾಕಿ ಹೋಗಿರತಕ್ಕ, ಬಿಟ್ಟುಹೋಗಿರತಕ್ಕ ತತ್ವಗಳು ಇವೊತ್ತು ನಮಗೆಲ್ಲಾ ಮಾರ್ಗದರ್ಶನ ಮಾಡುತ್ತಿದೆ. ಅದೇ ರೀತಿ ನಮ್ಮ ಸ್ನೇಹಿತರಾಗಿದ್ದಂಥ ಶ್ರೀಮಾನ್ ಹೆಚ್.ಜಿ. ಚೆನ್ನಪ್ಪನವರು, 1972ನೇ ಇಸವಿಯಲ್ಲಿ ನಾನು ಪ್ರಥಮ ಭಾರಿಗೆ ವಿಧಾನಸಭೆಗೆ ಬಂದಾಗ ನನ್ನ ಪಕ್ಕದಲ್ಲಿಯೇ ಕೂರುತ್ತಿದ್ದರು. ಅವರು ಸಹಾ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದು ಬಂದಿದ್ದವರು, ನಾವೆಲ್ಲರೂ ಸಹಾ ಈ ಸಭೆಯಲ್ಲಿ ಹಿಂದುಗಡೆ ಕುಳಿತಿರುತ್ತಿದ್ದೆವು. ಅವರು ಈ ಸದನದ ಕಾರ್ಯಕಲಾಪದಲ್ಲಿ ಬಹಳ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಅದರಲ್ಲೂ ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳ ಮತ್ತು ರೈತರ ವಿಚಾರಗಳು ಬಂದಾಗ ಪ್ರತಿ ಸಂದರ್ಭಗಳಲ್ಲಿಯೂ ಕೂಡ, ಅವಕಾಶ ಸಿಕ್ಕಿದಾಗಲೆಲ್ಲಾ ಅವರು ಆ ಅವಕಾಶವನ್ನು ಉಪಯೋಗಿಸಿ ಗ್ರಾಮ ಜೀವನ ಮತ್ತು ರೈತರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಮಾತನಾಡುತ್ತಿದ್ದರು. ಅವರು ಇವೊತ್ತಿನ ದಿವಸ ನಮ್ಮನ್ನು ಅಗಲಿ ಹೋಗಿದ್ದಾರೆ. ಅದೇ ರೀತಿಯಲ್ಲಿ ಇವೊತ್ತು ಶ್ರೀ ಕಲಮರ್‌ಕರ್ ಅವರು ಈ ರಾಜ್ಯದಲ್ಲಿ ಮಾತ್ರವಲ್ಲ, ಈ ದೇಶದಲ್ಲಿಯೇ ನಾವು ಚಿಕ್ಕ ಹುಡುಗರಾಗಿದ್ದಾಗ ಶಾಲಾ-ಕಾಲೇಜಿನಲ್ಲಿ ಓದುತ್ತಿದ್ದ ಸಂದರ್ಭದಲ್ಲಿ ಅತ್ಯಂತ ಎತ್ತರ, ಅತ್ಯಂತ ಉನ್ನತ ಮಟ್ಟದ ನಾಯಕರಾಗಿದ್ದರು. ಶ್ರೀ ಉಮಾಶಂಕರ ದೀಕ್ಷಿತ್ ಇವರು ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿದ್ದರು. ಅಷ್ಟೇ ಅಲ್ಲದೆ, ಅವರು ದೇಶದ ಒಬ್ಬ ಮಹಾನ್ ನಾಯಕರಾಗಿದ್ದಂಥವರು. ಈ ಎಲ್ಲಾ ಅಗಲಿದ ನಾಯಕರುಗಳಿಗೆ ಚಿರಶಾಂತಿಯನ್ನು ಕೋರಿ, ತಾವು ಇಟ್ಟಿರಕ್ಕ ಈ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

\+ ಶ್ರೀ ಬಾಬಾಗೌಡ ರುದ್ರಗೌಡ ಪಾಟೀಲ್ (ಕಿತ್ತೂರು): ಮಾನ್ಯ ಸಭಾಧ್ಯಕ್ಷರೆ, ಮಾಜಿ ಪ್ರಧಾನಮಂತ್ರಿ ದಿವಂಗತ ರಾಜೀವಗಾಂಧಿಯವರ ಹತ್ಯೆಯಿಂದ ಪ್ರಪಂಚದಲ್ಲಿ ನಾವು ತಲೆ ತಗ್ಗಿಸುವಂಥ, ನಾಚಿಕೆ ಪಡತಕ್ಕಂಥ ಸಂಗತಿಯಾಗಿದೆ. ಜನತಂತ್ರದಲ್ಲಿ ರಾಜಕೀಯ ಪ್ರತಿಭಟನೆಗೆ ಹತ್ಯೆ ಮತ್ತು ಕೊಲೆಗಳು ಮಾರ್ಗಗಳಲ್ಲ. ಆದರೆ ಈ ಪರಿಸ್ಥಿತಿ ಬರಲಿಕ್ಕೆ ನಾವೇ ಕಾರಣ ಎಂದು ತಿಳಿದುಕೊಳ್ಳಬಹುದು. ಏಕೆಂದರೆ ನಾವು ಸ್ವಾತಂತ್ರ್ಯ ಸಿಕ್ಕಿದ ನಂತರ ಭಾವನಾತ್ಮಕ ಮತ್ತು ಸಾಂಪ್ರದಾಯಿಕ ರಾಜಕಾರಣವನ್ನು ಬೆಳಿಸಿಕೊಂಡು ಬಂದಿದ್ದೇ ಇದಕ್ಕೆ ಕಾರಣ. ಆದುದರಿಂದ, ಇವೊತ್ತು ನಾವೆಲ್ಲರೂ ಈ ಭಾವನಾತ್ಮಕ ಮತ್ತು ಸಾಂಪ್ರದಾಯಿಕ ರಾಜಕಾರಣ ಬಿಟ್ಟು ವೈಚಾರಿಕ ರಾಜಕಾರಣ

ಬೆಳೆಸುವುದೇ ನಾವು ರಾಜೀವಗಾಂಧಿಯವರಿಗೆ ನಿಜವಾಗಿ ಅರ್ಪಿಸಬಹುದಾದಂಥ ಶ್ರದ್ಧಾಂಜಲಿ ಎಂದು ತಿಳಿದುಕೊಂಡಿದ್ದೇನೆ. ನನ್ನ ಪರವಾಗಿ, ಕರ್ನಾಟಕದ ರೈತರ ಪರವಾಗಿ, ನನ್ನ ಪಕ್ಷದ ಪರವಾಗಿ ರಾಜೀವಗಾಂಧಿಯವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ದೇವರಲ್ಲಿ ಬೇಡುತ್ತೇನೆ. ಅದೇ ರೀತಿಯಾಗಿ ಮಾನ್ಯ ಶ್ರೀ ಉಮಾಶಂಕರ ದೀಕ್ಷಿತ್‌ರವರು, ಶ್ರೀ ಎಡ್ಯೆಯವರು, ಶ್ರೀ ಚೆನ್ನಪ್ಪನವರು, ಶ್ರೀ ಬಸವಂತರಾವ್ ಬಸವನಗೌಡರು, ಶ್ರೀ ಎಸ್. ಎ. ಡಾಂಗೆಯವರು, ಶ್ರೀ ಕಲಮರ್‌ಕರ್ ಇವರುಗಳೆಲ್ಲರಿಗೂ ನನ್ನ ಪರವಾಗಿ ಮತ್ತು ರೈತರ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದ್ದೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ತಾವು ಈ ಸಭೆಯಲ್ಲಿ ಮಂಡಿಸಿದಂತಹ ಸಂತಾಪ ಸೂಚಕ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಮೇ 21ನೇ ತಾರೀಖು ರಾತ್ರಿ ಈ ದೇಶದ ಕರಾಳ ದಿನ. ನಾನು ಆವೊತ್ತು ಮೈಸೂರಿನ ಸರ್ಕಾರಿ ಭವನದಲ್ಲಿದ್ದೆ. ಯಾವುದೋ ಚುನಾವಣಾ ಸಂದರ್ಭದಲ್ಲಿ ಸರ್ಕಾರಿ ಭವನಕ್ಕೆ ನಾನು ಆ ದಿನ ರಾತ್ರಿ 10.10 ಗಂಟೆಗೆ ಬಂದಾಗ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ರಮೇಶ್‌ರವರು, ಅವರ ಸಿಬ್ಬಂದಿ ಮತ್ತು ಅನೇಕ ಜನರು ನಿಂತಿದ್ದರು. ಅವರೆಲ್ಲರೂ ಒಂದು ರೀತಿಯ ದುಃಖತಪ್ತರಾಗಿದ್ದರು. ಚುನಾವಣಾ ಸಮಯದಲ್ಲಿ ಈ ರೀತಿ ಭಯಭೀತರಾಗಿ ನಿಂತಿದ್ದಾರಲ್ಲ ಅದಕ್ಕೆ ಏನು ಕಾರಣವೆಂದು ನನಗನ್ನಿಸಿತು. ಆಗ ಶ್ರೀ ರಮೇಶ್‌ರವರು ಆಕಸ್ಮಿಕವಾಗಿ ರಾಜೀವಗಾಂಧಿಯವರು ಕಗ್ಗೊಲೆಯಾದರೆಂದು ಹೇಳಿದರು. ಆ ಒಂದು ನಿಮಿಷ ನನ್ನ ಮನಸ್ಸಿನಲ್ಲಿ ಒಂದು ರೀತಿಯ ನೋವು-ದುಃಖ ಎರಡೂ ಆಯಿತು. ಈ ನೋವು ದೇಶದ ಎಲ್ಲಾ ಜನರಲ್ಲಿಯೂ ಇತ್ತು. ಈ ದೇಶದ ಒಬ್ಬ ಮಹಾನ್ ನಾಯಕ, ಅತ್ಯಂತ ಎತ್ತರಕ್ಕೆ ಬೆಳೆದವರು, ಈ ದೇಶದ ಭದ್ರತೆಗಾಗಿ, ಈ ರಾಷ್ಟ್ರದ ಉನ್ನತಿಗಾಗಿ ಅವರು ಬದುಕಿ ಉಳಿಯಬೇಕಾಗಿತ್ತು. ಇವೊತ್ತಿನ ದಿವಸ ಅಂತಹ ಒಬ್ಬ ಮಹಾನ್ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ನಮ್ಮ ದೇಶದ ಭದ್ರತೆ, ರಕ್ಷಣೆ, ಗುಪ್ತಚರ್ಯೆ ಇವೆಲ್ಲವೂ ಇವೊತ್ತು ಏನಾಗಿದೆ ಎನ್ನತಕ್ಕಂಥ ಒಂದು ದೊಡ್ಡ ವಿಸ್ಮಯವಾಗುತ್ತಿದೆ. ಅವರಿಗೆ ಕೊಟ್ಟಿದ್ದಂಥ ರಕ್ಷಣೆಯಲ್ಲಿ ಅವರನ್ನು ಯಾವ ರೀತಿ ರಕ್ಷಣೆ ಮಾಡಿದರು ಎನ್ನತಕ್ಕಂತಹ ಶಂಕೆ ಉದ್ಭವವಾಗುತ್ತಿದೆ. ಒಂದಾದ ಮೇಲೆ ಒಂದರಂತೆ ಈ ರೀತಿಯ ಕೃತ್ಯಗಳು ನಡೆಯುತ್ತಿದೆ. ಮೊದಲು ಶ್ರೀಮತಿ ಇಂದಿರಾಗಾಂಧಿಯವರ ಕೊಲೆ ಆಯಿತು. ಅಂದೇ ಯಾವ ರೀತಿ ಈ ದೇಶವನ್ನು ನೋಡಬೇಕು, ಯಾವ ರೀತಿ ಎಲ್ಲಾ ನಾಯಕರನ್ನು ನೋಡಬೇಕು ಎಂದು ಎಚ್ಚರವಾಗಬೇಕಿತ್ತು. ನಿಜವಾಗಿಯೂ ಶ್ರೀ ರಾಜೀವ್‌ಗಾಂಧಿಯವರು ಅನೇಕ ಸಭೆ ಸಮಾರಂಭಗಳಿಗೆ ಬಂದಾಗ ತಾನೇ ಜನಗಳ ಹತ್ತಿರ ಹೋಗಬೇಕೆಂದು ರಕ್ಷಣಾಬಲದವರನ್ನು ತಳ್ಳುತ್ತಿದ್ದರು. ನನಗನ್ನಿಸುತ್ತದೆ ಈ ದೇಶದಲ್ಲಿ ರಕ್ಷಣಾ ಬಲ ಕುಸಿದಿದ್ದು ಗುಪ್ತದಳವು ಸಂಪೂರ್ಣವಾಗಿ ವಿಫಲವಾಗಿದೆ ಅವರನ್ನು ಕೊಲೆ ಮಾಡಿದವರು ಯಾರು ಎಂದು ಇನ್ನೂ ಕೂಡ ಪತ್ತೆ ಹಚ್ಚಲು ಸಾಧ್ಯವಾಗಿಲ್ಲವೆಂದಾಗ ಈ ದೇಶ ನಿಜವಾಗಿಯೂ ತಲೆತಗ್ಗಿಸತಕ್ಕ ಪರಿಸ್ಥಿತಿ ಬಂದಿದೆ. ಇನ್ನು ಮುಂದೆ ಈ ದೇಶಕ್ಕೆ ಎಲ್ಲಾ ರಾಜಕಾರಣಗಳು ನಮ್ಮ ದೇಶದ ಭದ್ರತೆ, ನಮ್ಮ ದೇಶದ ರಕ್ಷಣೆ, ನಮ್ಮ ದೇಶದ ಗುಪ್ತದಳ ಎಷ್ಟರಮಟ್ಟಿಗಿದೆ ಎನ್ನುವ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇಂತಹ ಒಬ್ಬ ಮಹಾ ನಾಯಕನನ್ನು ಕಳೆದುಕೊಂಡ ಸಂದರ್ಭದಲ್ಲಿ ತಾವು ಮುಕ್ತಕಂಠದಿಂದ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೀರಿ. ನಿಜಕ್ಕೂ ತಮ್ಮ ಪ್ರತಿಯೊಂದು ಅಕ್ಷರಕ್ಕೂ ನಾನು ಸಂಪೂರ್ಣವಾಗಿ ಬೆಂಬಲವನ್ನು ಮತ್ತು ಅನುಮೋದನೆಯನ್ನು ನೀಡುತ್ತಾ ಅವರ ಆತ್ಮಕ್ಕೆ ಶಾಂತಿ ದೊರಕಲಿ ಎನ್ನುವ ಮಾತನ್ನು ಹೇಳಿ, ಇದೇ ಸಂದರ್ಭದಲ್ಲಿ ಶ್ರೀ ಎಸ್.ಎ. ಡಾಂಗೆ, ಶ್ರೀ ಉಮಾಶಂಕರ್ ದೀಕ್ಷಿತ್, ಶ್ರೀ ಎಸ್.ಸಿ. ಎಡ್ಯೆ, ಶ್ರೀಮತಿ ರುಕ್ಮಿಣಿಯಮ್ಮ ಶ್ರೀ ಹೆಚ್.ಜಿ. ಚನ್ನಪ್ಪ

ಮತ್ತು ಶ್ರೀ ಬಸವಂತರಾವ್ ಬಸವನಗೌಡ ಹಾಗೂ ಕರ್ಮರ್ಕರ್ ಮುಂತಾದವರೆಲ್ಲರ ಆತ್ಮಕ್ಕೆ ಶಾಂತಿ ಕೋರಿ ಶ್ರದ್ಧಾಂಜಲಿಯನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ SRI QUMURUL ISLAM (Gulbarga): Mr. Speaker Sir, on the night of 21st May at about 10.45 when Mr. George Fernandes came late to give his speech, I went to Aiwan-E-Shahi and there I came to know through the Superintendent of Police that Sri Rajivji was assassinated. This was a very shocking news not only for myself but for the whole nation. For sometime, I just recollected the past history of our country. This country, which got independence after lot of sacrifices, lost its father of nation, then Mrs. Indira Gandhi and then Mr. Rajiv Gandhi. If we recollect the situation of those days, whenever the nation determined to establish a democratic and a secular norm to become very strong, a force emerged and the nation lost the Rashtrapitha Mahatma Gandhi. Some way, when we talked of stability and secularism, we lost Mrs. Indira Gandhi. Here on 21st, when the whole nation was for a selection of a very sensitive issue, I can just narrate what transpired between two minority Muslim League Leaders. Mr. G. M. Banatwala and Mr. Sulieman Sait before the issue of the manifesto of the Congress and Mr.Rajiji and our present Prime Minister. They were saying, it is the government which should take a strong decision when certain sensitive issues arise. If these decisions are not taken, the nation has to pay for it. That is why a firm decision was taken regarding that 15th August 1947 and that credit goes to late Rajiv. It is very much said in its (Congress) manifesto that sensitive issues of the nation cannot stand on a firm secular and democratic norm. In the same way, the task force to finish communal riots, implementation of 15 point programme, all these realisation came to Rajivji after his past experience as Prime Minister. But, it is very unfortunate that we have lost a very dynamic, charismatic and internationally fame leader from this country. I pay my tributes to him and I only pray Almighty Allah that his soul rest in peace in heaven, and also courage be given to soniaji and two of his children.

In the same way, I also pay my tributes and pray Almighty Allah that the souls of Sri Dangeji, Smt. Rukmaniamma, Sri Karamankar and Sri Umashankar Dixit, a swatantra senani, rest in peace in heaven.

+ SRI B. I. PATIL (Uchagoan): Mr. Speaker Sir, we have lost a great leader Sri Rajiv Gandhi who had a great hope and aspiration to lead our country and solve the various problems faced by it. We have lost him at his prime. It is a great loss and only to India but also to the whole world. At this moment we can pay real respect to him only by following and implementing his principles. On behalf of the M.E.S party I condole the death of our beloved leader as well as Sri Dange, Sri Umashankar Dixit and Sri karamankar. Thank you.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಸನ್ಮಾನ್ಯ ಅಧ್ಯಕ್ಷರೇ, ತಾವು ಸಭೆಯ ಮುಂದೆ ಮಂಡಿಸಿರತಕ್ಕ ಸಂತಾಪ ಸೂಚನೆ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ಸೂಚಿಸಿ, ಎರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. 21ನೇ ತಾರೀಖು ರಾತ್ರಿ ಈ ದೇಶದ ಮಾಜಿ ಪ್ರಧಾನಿ ದಿವಂಗತ ರಾಜೀವ್ ಗಾಂಧಿಯವರ ಸಾವಿನ ಸುದ್ದಿ ಬಂದಾಗ ನಾನು ರಾತ್ರಿ—— +11-00 ಗಂಟೆಗೆ ಮಳವಳ್ಳಿಯಲ್ಲಿದ್ದೆ. ಈ ಸುದ್ದಿ ತಲುಪಿದಾಗ ನನಗೆ ನಂಬಲಿಕ್ಕೆ ಆಗಲಿಲ್ಲ. ಕಾರಣ, ಯಾರೋ ತಿಳಿಗೇಡಿಗಳು ಚುನಾವಣಾ ಸಂದರ್ಭದಲ್ಲಿ ಈ ರೀತಿ ಪ್ರಚಾರ ಮಾಡುತ್ತಿರಬಹುದು ಎಂದು ನನ್ನ ಚುನಾವಣಾ ಪ್ರಚಾರವನ್ನು ನಾನು ಮುಂದುವರಿಸುತ್ತಾ ಇದ್ದೆ. ಆ ಸಂದರ್ಭದಲ್ಲಿ ಪೋಲೀಸರು ನನಗೆ ಈ ಸುದ್ದಿ ಕೊಟ್ಟು ಇದು ನಿಜವೆಂದು ಹೇಳಿದ ಮೇಲೆ ನಂಬಬೇಕಾಗಿ ಬಂತು. 1984ನೇ ಇಸವಿಯಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಕಗ್ಗೊಲೆ ಆದಾಗ ನಾನು ನೀರಾವರಿ ಇಲಾಖೆಯ ಮಂತ್ರಿಯಾಗಿದ್ದು, ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಒಂದು ನಾಲೆಯ ಕೆಲಸವನ್ನು ಇನ್ಸ್‌ಪೆಕ್ಷನ್ ಮಾಡಲಿಕ್ಕೆ ಹೋದಾಗ ಆ ಸುದ್ದಿ ಕೇಳಿ ನನಗೆ ಬಹಳ ದುಃಖವಾಯಿತು.

ಆಗ ನನ್ನಿಂದ ಅಳುವನ್ನು ಸಹಿತ ತಡೆದುಕೊಳ್ಳುವುದಕ್ಕೆ ಆಗಲಿಲ್ಲ. ಕಾರಣ, ನನ್ನ 21 ವರ್ಷಗಳ ರಾಜಕೀಯ ಜೀವನದಲ್ಲಿ ಕಾಂಗ್ರೆಸ್ಸ್‌ನ್ನು ವಿರೋಧ ಮಾಡಿದ್ದೆ. ಕಾಂಗ್ರೆಸ್ ಪಕ್ಷದಿಂದ ನಾನು ಯಾವತ್ತೂ ಸಹ ರಾಜಕೀಯವಾಗಿ ಲಾಭಪಡೆಯಲಿಕ್ಕೆ ಅಥವಾ ಕಾಂಗ್ರೆಸ್ ಪಕ್ಷ ಸೇರಲಿಕ್ಕೆ ಪ್ರಯತ್ನ ಮಾಡಲಿಲ್ಲ. ನಾವು ಶ್ರೀಮತಿ ಇಂದಿರಾಗಾಂಧಿಯವರನ್ನು ಕಳೆದುಕೊಂಡೆವು. ಅದಾದ ಮೇಲೆ ಈ ದೇಶದ ಮಾಜಿ ಪ್ರಧಾನಿ ಅಷ್ಟೇ ಅಲ್ಲ, ಒಂದು ದೊಡ್ಡ ಕುಟುಂಬದ ಉತ್ತರಾಧಿಕಾರಿಯಾಗಿದ್ದ ರಾಜೀವ್ ಗಾಂಧಿಯವರನ್ನು ಕಳೆದುಕೊಂಡಿದ್ದೇವೆ. ಇದು ಕೇವಲ ಕಾಂಗ್ರೆಸ್ ಪಕ್ಷಕ್ಕೆ ಆಗಿತಕ್ಕಂತಹ ನಷ್ಟವಲ್ಲ, ದೇಶಕ್ಕೆ ಆಗಿರತಕ್ಕಂತಹ ನಷ್ಟವಲ್ಲ, ಪ್ರಜಾತಂತ್ರದಲ್ಲಿ ನಂಬಿಕೆ ಇರತಕ್ಕಂತಹ ನಾವೆಲ್ಲರೂ ಸಹ ಬಹಳ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ಇವತ್ತು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಹಿಂಸಾಚಾರಕ್ಕೆ ನಾವು ಆಸ್ಪದವನ್ನು ಮಾಡಿಕೊಟ್ಟರೆ, ಈ ದೇಶ ಏನು ಒಂದು ಹೋರಾಟ ಮಾಡಿ ನಾವು ಸ್ವಾತಂತ್ರ್ಯವನ್ನು ಗಳಿಸಿಕೊಂಡಿದ್ದೆವೋ ಈ ಸ್ವಾತಂತ್ರ್ಯವನ್ನು ನಾವು ಉಳಿಸಿಕೊಳ್ಳಲಿಕ್ಕೆ ಸಾಧ್ಯವೇ ಮತ್ತು ಅದರ ಜೊತೆಗೆ ಈ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂದು ಬಹಳ ಧೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಇವೊತ್ತು ನಾವು ಬಹಳ ಸಂಕಷ್ಟ ಆರ್ಥಿಕ ಪರಿಸ್ಥಿತಿಯಲ್ಲಿದ್ದೇವೆ. ಇದುವರೆಗೂ ನಾವು ಪಕ್ಷದ ಚೌಕಟ್ಟುಗಳಲ್ಲಿ ಮಾತುಗಳನ್ನು ಹೇಳುತ್ತಿದ್ದೆವು. ನಮ್ಮ ದೇಶದಲ್ಲಿ ಅನೇಕ ಪಕ್ಷಗಳು ಇವತ್ತೂ ಸಹಿತ ಅಪ್ರತ್ಯಕ್ಷವಾಗಿ ಹಿಂಸಾಚಾರವನ್ನು ಬೆಂಬಲಿಸತಕ್ಕಂಥ ಮಾತುಗಳನ್ನು ಆಡುತ್ತಿವೆ. ಇವುಗಳ ಬಗ್ಗೆಯೂ ನಾವು ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅಪ್ರತ್ಯಕ್ಷವಾಗಿ ಹಿಂಸಾಚಾರವನ್ನು ಅಥವಾ ಮಿಲಿಟೆನ್ಸಿಯನ್ನು, ಅದು ಯಾವುದೇ ಒಂದು ವಿಚಾರದ ಬಗ್ಗೆ ಪ್ರಚೋದನೆ ಮಾಡತಕ್ಕಂಥ ವಿಚಾರಗಳು ಇರಬಹುದು, ಮನುಷ್ಯನ ಭಾವನೆಗಳನ್ನು ಪ್ರಚೋದನೆ ಮಾಡಬಹುದು. ಅದು ಬಡತನದ್ದು ಇರಬಹುದು, ಧರ್ಮದ್ದು ಇರಬಹುದು, ಜಾತಿಯದು ಇರಬಹುದು. ಈ ರೀತಿ ಭಾವನೆಗಳಿಗೆ ಪ್ರಚೋದನೆ ಮಾಡಿದಾಗ ಏನೊಂದು ಮಿಲಿಟೆನ್ಸಿ ಆಗುತ್ತದೆ. ಆ ಭಾವನೆ ಬರುತ್ತದೆ, ಅದನ್ನು ತಡೆಗಟ್ಟಲಿಕ್ಕೆ ನಮ್ಮ ಯಾರ ಕೈಯಲ್ಲೂ ಸಾಧ್ಯವಿಲ್ಲ. ಕೋಮುಗಲಭೆಗಳನ್ನು ಸಾವಿರಾರು ಜನರು ಸಾಯುವುದನ್ನು ನಾವು ನೋಡುತ್ತೇವೆ. ಕೋಮುಗಲಭೆಗಳನ್ನು ಹುಟ್ಟುಹಾಕಿದಂಥ ಮುಖಂಡರುಗಳು ಮತ್ತೆ ಅದನ್ನು ತಡೆಗಟ್ಟಬೇಕೆಂದು ಹೇಳಿದಾಗ ಅದು ಯಾರ ಕೈಯಲ್ಲೂ ಸಾಧ್ಯವಿಲ್ಲ. ಅಂತಹ ಒಂದು ಪರಿಸ್ಥಿತಿ ಇವೊತ್ತು ನಮ್ಮ ದೇಶಕ್ಕೆ ಬಂದಿದೆ. ನಾವು ಕೇವಲ ನಮ್ಮ ಪಕ್ಷದ ದೃಷ್ಟಿಯಿಂದ ಮಾತನಾಡಿಕೊಂಡು ಹೋಗುವುದರಿಂದ ಈ ದೇಶದ ಪ್ರಜಾತಂತ್ರ ವ್ಯವಸ್ಥೆಯನ್ನು ಉಳಿಸಲಿಕ್ಕೆ ಸಾಧ್ಯವಿಲ್ಲವೆಂದು

ನಾನು ತಿಳಿದಿದ್ದೇನೆ. ಇವೊತ್ತು ನಾವೆಲ್ಲಾ ಇದರ ಬಗ್ಗೆ ಬಹಳ ಗಂಭೀರವಾಗಿ ವಿಚಾರ ಮಾಡಬೇಕಾಗಿದೆ. ಸಾರ್ವಜನಿಕರು ಸಹಿತ ಈ ವ್ಯವಸ್ಥೆಯ ಬಗ್ಗೆ ಒಂದು ರೀತಿಯ ಜಿಗುಪ್ಸೆ ವ್ಯಕ್ತಮಾಡಿದ್ದಾರೆ. ಅದು ಎಷ್ಟು ಜನ ಮತದಾರರು ಮತಗಟ್ಟೆಗೆ ಬಂದಿದ್ದಾರೆ ಎನ್ನುವುದರಿಂದಲೇ ಗೊತ್ತಾಗುತ್ತದೆ. ಶೇಕಡ 50ರಷ್ಟು ಜನ ಸಹಿತ ಮತಗಟ್ಟೆಗೆ ಬಂದಿಲ್ಲ ಅಂದರೆ ಒಂದು ಕಡೆ ಭಯದ ವಾತಾರಣ, ಮತ್ತೊಂದು ಕಡೆ ನಾವೇನು ಹೇಳಿದ್ದೇವೆ ಅದನ್ನು ಮಾಡದೇ ಇರತಕ್ಕಂಥಾದ್ದು. ಇದನ್ನೆಲ್ಲಾ ನೋಡಿದಾಗ ನಮ್ಮ ದೇಶದ ಪ್ರಜಾತಂತ್ರ ವ್ಯವಸ್ಥೆಗೆ ಒಂದು ದೊಡ್ಡ ಗಂಡಾಂತರ ಈ ಹಿಂಸಾಚಾರದಿಂದ ಬಂದಿದೆ ಎಂದು ಹೇಳಬೇಕಾಗುತ್ತದೆ. ಈಗ ಕೇಂದ್ರ ಸರ್ಕಾರದವರು ಇದರ ಬಗ್ಗೆ ಒಂದು ವಿಚಾರಣಾ ಆಯೋಗವನ್ನು ನೇಮಕ ಮಾಡಿದ್ದಾರೆ. ಸಿ.ಬಿ.ಐ.ಗೆ ಅದರ ಜವಾಬ್ದಾರಿಯನ್ನು ಕೊಟ್ಟಿದ್ದಾರೆ. ನಮ್ಮ ರಾಷ್ಟ್ರದಲ್ಲಿ ಇವೊತ್ತು ಅನೇಕ ಮುಖಂಡರುಗಳು ತಮ್ಮ ಪ್ರಾಣ ಭಯದಿಂದ ಕೆಲಸ ಮಾಡತಕ್ಕ ಕಾಲ ಬಂದಿದೆ. ಮಾಜಿ ಪ್ರಧಾನಿಗಳಿರಬಹುದು, ವಿ.ಪಿ. ಸಿಂಗ್‌ರವರು ಇರಬಹುದು, ಚಂದ್ರಶೇಖರ್ ಇರಬಹುದು ಅಥವಾ ಮುಖ್ಯಮಂತ್ರಿಗಳು ಇರಬಹುದು. ತಮಿಳುನಾಡಿನ ಮುಖ್ಯಮಂತ್ರಿಗಳು ಸಹಿತ ತಮ್ಮ ಜೀವಕ್ಕೆ ಭಯ ಇದೆ ಎನ್ನತಕ್ಕ ರೀತಿಯಲ್ಲಿ ಕೆಲಸ ಮಾಡತಕ್ಕಂಥ ಕಾಲ ಬಂದಿದೆ. ದೈವವಶಾತ್ ನಮ್ಮ ರಾಜ್ಯಕ್ಕೆ ಅದು ಇನ್ನೂ ಬಂದಿಲ್ಲ. ಅದು ಬಾರದೇ ಇರಲೆಂದು ನಾವೆಲ್ಲಾ ಪ್ರಯತ್ನ ಮಾಡೋಣ ಮತ್ತು ಹಾರೈಸೋಣ. ಆದರೆ ಈ ದೇಶದ ಪರಿಸ್ಥಿತಿ ಈ ರೀತಿ ಇದ್ದಾಗ ನಮ್ಮ ವ್ಯವಸ್ತೆ ಹೇಗೆ ಉಳಿಯಲಿಕ್ಕೆ ಸಾಧ್ಯ. ನಮ್ಮ ನಾಗರಾಜ್‌ರವರು ಸಹಿತ ಹೇಳಿದ್ದಾರೆ. ನಮ್ಮ ದೇಶದ ಇಷ್ಟೊಂದು ದೊಡ್ಡ ಒಂದು ವ್ಯವಸ್ಥೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ನಾವು ರಕ್ಷಣೆಗೋಸ್ಕರ ಖರ್ಚು ಮಾಡುತ್ತಿದ್ದೇವೆ, ಆದರೆ ರಕ್ಷಣೆ ಮಾಡತಕ್ಕಂಥ ಎಲ್ಲಾ ವ್ಯವಸ್ಥೆಗಳು ಕುಸಿತವಾಗಿದೆ ಎಂದು ಇವೊತ್ತು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಎಷ್ಟೇ ಹೇಳಬಹುದು, ಆದರೂ ಸಹಿತ ಶ್ರೀ ರಾಜೀವ್ ಗಾಂಧಿಯವರ ಪ್ರಾಣ ಯಾವ ರೀತಿ ಹೋಗಿದೆ ಎನ್ನುವುದನ್ನು ನೋಡಿದಾಗ ನಮಗೆ ದಿಗ್ಭ್ರಾಂತಿಯಾಗುತ್ತದೆ. ಈ ಎಲ್ಲಾ ವ್ಯವಸ್ಥೆಯೂ ಸಂಪೂರ್ಣವಾಗಿ ವಿಫಲವಾಗಿದೆ ಎನ್ನತಕ್ಕದ್ದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಇದರ ಬಗ್ಗೆ ನಾವು ದೀರ್ಘವಾಗಿ ಯೋಚನೆ ಮಾಡಬೇಕಾಗುತ್ತದೆ. ಎಲ್ಲಾ ರಾಜಕೀಯ ಪಕ್ಷಗಳವರೂ ಸಹಿತ ಇನ್ನುಮೇಲೆ ಇದರ ಬಗ್ಗೆ ದೀರ್ಘವಾಗಿ ಯೋಚನೆ ಮಾಡಿ ಸ್ವಾತಂತ್ರ್ಯ ಸಂಗ್ರಾಮ ಸಂದರ್ಭದಲ್ಲಿ ಬ್ರಿಟೀಷರಿಂದ ನಮ್ಮ ರಾಷ್ಟ್ರವನ್ನು ತೆಗೆದುಕೊಳ್ಳಬೇಕಾದರೆ ನಾವೆಲ್ಲಾ ಯಾವ ರೀತಿ ಗಂಭೀರವಾಗಿ ಒಗ್ಗಟ್ಟಿನಿಂದ ಹೋರಾಟವನ್ನು ಮಾಡಿದೆವು ಆ ರೀತಿ ಇವೊತ್ತು ದೇಶದಲ್ಲಿ ಬೆಳೆಯುತ್ತಿರತಕ್ಕಂಥ ಈ ಹಿಂಸಾಚಾರ ಪ್ರವೃತ್ತಿಯನ್ನು ತಡೆಗಟ್ಟಲಿಕ್ಕೆ ನಾವೆಲ್ಲಾ ಪ್ರಯತ್ನ ಮಾಡಬೇಕಾಗುತ್ತದೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರುಗಳು ಬಹಳ ದೀರ್ಘವಾಗಿ ಮತ್ತು ಪ್ರಾಮಾಣಿಕವಾಗಿ ಆತ್ಮ ವಿಮರ್ಶೆಯನ್ನು ಮಾಡಿಕೊಳ್ಳಬೇಕಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ದಿವಂಗತ ರಾಜೀವ್‌ಗಾಂಧಿಯವರ ಸಾವು ನಿಜಕ್ಕೂ ಈ ದೇಶದ ಎಲ್ಲರನ್ನೂ ಸಹಿತ ದುಃಖಕ್ಕೆ ಒಳಮಾಡಿರತಕ್ಕಂಥ ಒಂದು ಸಂದರ್ಭ. ಅವರ ಕುಟುಂಬ ವರ್ಗದವರಿಗೆ ಈ ಸಾವಿನ ದುಃಖವನ್ನು ಬರಿಸಲಿಕ್ಕೆ ಭಗವಂತ ಶಕ್ತಿಯನ್ನು ಕೊಡಲಿ ಎಂದು ನಾನು ಹಾರೈಸುತ್ತೇನೆ ಮತ್ತು ಅನೇಕ ಜನ ಮಹನೀಯರುಗಳು ನಮ್ಮ ರಾಜ್ಯಕ್ಕೆ, ನಮ್ಮ ರಾಷ್ಟ್ರಕ್ಕೆ ಸೇವೆ ಮಾಡಿರತಕ್ಕದ್ದನ್ನು ತಾವು ತಮ್ಮ ನಿರ್ಣಯದಲ್ಲಿ ಸ್ಮರಿಸಿದ್ದೀರಿ.

ನಿಮ್ಮ ಜೊತೆಯಲ್ಲಿ ನಾನೂ ಸಹಿತ ಈ ವಿಚಾರಗಳಲ್ಲಿ ಭಾಗಿಯಾಗಿದ್ದೇನೆ.

ಇನ್ನು ಹಿರಿಯ ಸದಸ್ಯರಾದ ಮಾನ್ಯ ಹೆಚ್.ಜಿ. ಚನ್ನಪ್ಪನವರ ಬಗ್ಗೆ ಹೇಳುವುದಾದರೆ, ಕಳೆದ 2-3 ವರ್ಷಗಳ ಕಾಲದಿಂದ ಮಾನ್ಯ ಚನ್ನಪ್ಪನವರ ಕುಟುಂಬದಲ್ಲಿ ಬಹಳ ಅನಾಹುತಗಳು ನಡೆದಿದೆ. 2 ವರ್ಷದ ಹಿಂದೆ ಅವರು ತಮ್ಮನನ್ನು ಕಳೆದುಕೊಂಡರು. 1 ವರ್ಷದ ಹಿಂದೆ ಅವರ ಮಂತ್ರಿಯಾದ ಸಂದರ್ಭದಲ್ಲಿ ತಮ್ಮ ಜ್ಯೇಷ್ಠ ಪುತ್ರನನ್ನು ಅಕಾಲಿಕವಾಗಿ ಕಳೆದುಕೊಂಡರು. ಇದರಿಂದಾಗಿ ಅವರ ಕುಟುಂಬದವರಿಗೆ ಬಹಳ ದೊಡ್ಡ ನಷ್ಟವಾಗಿದೆ. ಮಾನ್ಯ ಚನ್ನಪ್ಪನವರು ನಮ್ಮ ಜಿಲ್ಲೆಗೆ ಮಾಡಿರತಕ್ಕ ಸೇವೆ ಅಪಾರವಾದುದು. ನಮ್ಮ ಜಿಲ್ಲೆಯ ಅತ್ಯಂತ ಮೇದಾವಿ ಪ್ರಾಮಾಣಿಕ ಇನ್ನೊಬ್ಬ ಮುಖಂಡರು ಎಂದರೆ ದಿವಂಗತ ಪೂಜ್ಯ ಕರಿಯಪ್ಪನವರು. ಈ ಸದನದಲ್ಲಿ ಬಹಳಷ್ಟು ವರ್ಷಗಳ ಕಾಲ ಕೆಲಸಮಾಡಿರತಕ್ಕವರು. ಅವರ ಆಶೀರ್ವಾದದಿಂದಲೆ ಇಲ್ಲಿಗೆ ನಾವೆಲ್ಲರೂ ಬಂದಿರತಕ್ಕದ್ದು. ಮಾನ್ಯ ಚನ್ನಪ್ಪನವರೂ ಕೂಡ ದಿವಂಗತ ಕರಿಯಪ್ಪನವರ ಶಿಷ್ಯರಾಗಿ, ಅತ್ಯಂತ ಪ್ರಾಮಾಣಿಕವಾಗಿ ರಾಜಕೀಯ ಜೀವನವನ್ನು ನಡೆಸಿದವರು. ಅವರು ಮಾಗಡಿ ತಾಲ್ಲೂಕಿನ ಅಭಿವೃದ್ಧಿಗೋಸ್ಕರ ಬಹಳಷ್ಟು ದುಡಿದಿದ್ದರು. ಅಂಥ ಒಬ್ಬ ಅಪರೂಪದ ವ್ಯಕ್ತಿಯನ್ನು ಇವತ್ತು ನಮ್ಮ ಜಿಲ್ಲೆ ಕಳೆದುಕೊಂಡಿದೆ. ಅದರಲ್ಲೂ ವಿಶೇಷವಾಗಿ ಮಾಗಡಿ ತಾಲ್ಲೂಕಿಗೆ ಬಹಳ ನಷ್ಟವಾಗಿದೆ. ಅವರ ಕುಟುಂಬ ವರ್ಗದವರೆಲ್ಲರಿಗೂ ಈ ದುಃಖವನ್ನು ಭರಿಸಲು ಆ ದಯಾಮಯನಾದ ಭಗವಂತನು ಶಕ್ತಿಯನ್ನು ಕೊಡಲೆಂದು ಹೇಳಿ, ಈ ಸಂತಾಪ ಸೂಚಕ ನಿರ್ಣಯದ ಬಗ್ಗೆ ನಾನು ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಂಥ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸ್ವರ್ಗೀಯರಾದ ಈ ಮಹನೀಯರ ಗೌರವಾರ್ಥ ಮಾನ್ಯ ಸದಸ್ಯರು ಎದ್ದುನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿ ಸದನದ ಸಂತಾಪವನ್ನು ವ್ಯಕ್ತಪಡಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷಕಾಲ ಎದ್ದುನಿಂತು ಮೌನವನ್ನಾಚರಿಸಿತು.)

ಪ್ರಕಟಣೆ

ಅಧ್ಯಕ್ಷರು: ಈ ಸದನದ ಸದಸ್ಯರಾಗಿದ್ದಂಥ ಶ್ರೀಮತಿ ಚಂದ್ರಪ್ರಭಾ ಅರಸ್‌ರವರು 10ನೇ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದು ಈ ಸದನದ ಸದಸ್ಯತ್ವಕ್ಕೆ ತಾ: 26.6.1991ರಂದು ಅವರು ನೀಡಿದ ರಾಜೀನಾಮೆಯನ್ನು ನಾನು ಅಂಗೀಕರಿಸಿದ್ದೇನೆ. ಈಗ ಸದನ ಮುಂದುವರೆದು ನಾಳೆ ಪ್ರಾತಃಕಾಲ 11.00 ಗಂಟೆಗೆ ಮತ್ತೆ ಸಮಾವೇಶಗೊಳ್ಳುವುದು.

(ಸದನವು 12ಗಂಟೆ 38 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 6ನೇ ಜುಲೈ ಮಾಹೆ 1991ರ ಶನಿವಾರದಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).